ॐ

# ಹಿಂದು ಸೇವಾ ಪ್ರತಿಷ್ಠಾನ

## ವಾರ್ಷಿಕ ವರದಿ 2018–19

**ಹಿಂದು ಸೇವಾ ಪ್ರತಿಷ್ಠಾನ**
ಅಜಿತಶ್ರೀ, 8/28, ಬಸವನಗುಡಿ ರಸ್ತೆ, ಬೆಂಗಳೂರು – 560 004
ದೂರವಾಣಿ: 080–26608926, 94803 16628, 94803 16629
**hinduseva@gmail.com | www.hinduseva.org**

# ಪ್ರಕಲ್ಪಗಳು

ಸಮಗ್ರ ಶಿಶು ಶಿಕ್ಷಣ ಮತ್ತು ಸಂಶೋಧನಾ ವಿಭಾಗ

ಯೋಗ ಭಾರತಿ

ಸೇವಾಮಿತ್ರ

ನ್ಯೂನತೆಗಳುಳ್ಳ ಮಕ್ಕಳ ಸೇವೆಯಲ್ಲಿ – ಅರುಣ ಚೇತನ
ಮನೋನಂದನ
ಸೇವಾ ಇನ್ ಆಕ್ಷನ್

ನೆಲೆ (ಅವಕಾಶವಂಚಿತ ಮಕ್ಕಳ ಆಶ್ರಯತಾಣ)

ಸೇವಾವ್ರತಿ ಕಾರ್ಯ

ಪ್ರಸನ್ನ ಆಪ್ತ ಸಲಹಾಕೇಂದ್ರ ಮತ್ತು ಮಕ್ಕಳ ಮಾರ್ಗದರ್ಶನ ಕೇಂದ್ರ

ಸೇವಾಕಿರಣ

ಸಮಗ್ರ ಶಿಶುಶಿಕ್ಷಣ

ಸುಪ್ರಜಾ

ಚಾಣಕ್ಯ ಭಾರತಿ

ಆಶ್ರಯ – ಕನ್ಯಪ್ಪಾಡಿ

# ಮುನ್ನುಡಿ

ಪ್ರತಿಷ್ಠಾನದ ಕಾರ್ಯಕ್ಕೆ ಒಂದು ಹೊಸ ಆಯಾಮ ಸೇರ್ಪಡೆಯಾಗಿರುವುದು ಈ ವರ್ಷದ ವಿಶೇಷ. ದಾನಿಗಳೊಬ್ಬರು ತ್ಯಾಗರಾಜನಗರದಲ್ಲಿ ತಮ್ಮ ಒಂದು ಕಟ್ಟಡವನ್ನು ಸೇವಾಕಾರ್ಯಗಳಿಗೆಂದು ಹಿಂದುಸೇವಾ ಪ್ರತಿಷ್ಠಾನಕ್ಕೆ ಬಿಟ್ಟುಕೊಟ್ಟಿದ್ದಾರೆ. ಅದೇ ಸಮಯದಲ್ಲಿ ಉಡುಪಿಯ ಆಯುರ್ವೇದಿಕ್ ಕಾಲೇಜಿನಲ್ಲಿ ಸೇವೆ ಮಾಡಿ ನಿವೃತ್ತರಾದ ಡಾ॥ ಉಷಾ ಅವರು ಹಿಂದುಸೇವಾ ಪ್ರತಿಷ್ಠಾನವನ್ನು ಸಂಪರ್ಕಿಸಿ ತಾವು ಏನಾದರೂ ಸೇವಾಕಾರ್ಯದಲ್ಲಿ ತೊಡಗಲು ಬಯಸುವುದಾಗಿ ತಿಳಿಸಿದರು. ಅವರೆಡರ ಸಂಯೋಗವೇ ತ್ಯಾಗರಾಜನಗರದಲ್ಲಿ ನಡೆಯುತ್ತಿರುವ 'ಸುಪ್ರಜಾ' ಗರ್ಭಸಂಸ್ಕಾರಕೇಂದ್ರ ಈ ಆರುತಿಂಗಳಲ್ಲಿ ಒಳ್ಳೆಯ ಫಲಿತಾಂಶವನ್ನೇ ಆ ಕೇಂದ್ರ ಕೊಟ್ಟಿದೆ.

ತುಮಕೂರಿನಲ್ಲಿ ನೆಲೆಗೆ ತಮ್ಮ ಮನೆಯನ್ನು ಕೊಟ್ಟಿದ ಶ್ರೀಮತಿ ವಸುಂಧರಮ್ಮ ಅವರು ಬೆಂಗಳೂರಿನ ಪದ್ಮನಾಭನಗರದಲ್ಲಿ ತಾವು ನೆಲೆಸಿದ್ದ ಮನೆಯನ್ನು ಪ್ರತಿಷ್ಠಾನಕ್ಕೆ ಕೊಡಲು ಬಯಸಿದ್ದರು. ಅವರ ದೇಹಾವಸಾನದ ನಂತರ ಅವರ ಸುಪುತ್ರ ಶ್ರೀ ಮಹಿತಿರುಮಲ ಅವರು ಪ್ರತಿಷ್ಠಾನದ ಸೇವಾ ಚಟುವಟಿಕೆಗಳಿಗೆಂದು ಬಿಟ್ಟುಕೊಟ್ಟಿರುತ್ತಾರೆ. ಅಲ್ಲೀಗ ಒಂದು ಉಚಿತ ಪಾಠದ ತರಗತಿ ಮತ್ತು ಒಂದು ಹೊಲಿಗೆ ತರಬೇತಿ ಕೆಂದ್ರ ನಡೆಯತ್ತಿದೆ. ಅದೇ ರೀತಿ ಆಸ್ಟ್ರೇಲಿಯದಲ್ಲಿರುವ ಶ್ರೀಮತಿ ಸರಸ್ವತಿ ಭಗಿನಿ ಅವರ ಬೆಂಗಳೂರಿನ "ರಮೇಶ್ ನಗರ" ದಲ್ಲಿರುವ ಮನೆಯನ್ನು ಪ್ರತಿಷ್ಠಾನದ ಕೆಲಸಗಳಿಗೆಂದು ಕೊಟ್ಟಿರುತ್ತಾರೆ.

ಈ ವರ್ಷ 'ಅಜಿತಶ್ರೀ' ಕಟ್ಟಡದ ಪುನಾರಚನೆಯನ್ನು ಮಾಡಲಾಗಿದೆ. ಕಟ್ಟಡದ 5ನೇ ಅಂತಸ್ತನ್ನು ನಿರ್ಮಿಸಲಾಗಿದ್ದು ಅಲ್ಲೀಗ ಒಂದು ಸಭಾಭವನವಿದೆ. ಉಳಿದಂತೆ

ಕೆಲವು ಆಂತರಿಕ ಪರಿವರ್ತನೆಗಳನ್ನು ಮಾಡಿಕೊಳ್ಳಲಾಗಿದೆ. 2019 ಜನವರಿ 12ರಂದು ಸಂಘದ ಸಹಸರಕಾರ್ಯವಾಹ ಮಾ. ದತ್ತಾತ್ರೇಯ ಹೊಸಬಾಳೆಯವರು ನವೀಕೃತ ಕಟ್ಟಡದ ಲೋಕಾರ್ಪಣೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಅದರ ಮರುದಿನ ಪೂರ್ವಸೇವಾವ್ರತಿಗಳ ಸಮಾವೇಶವೂ ನಡೆಯಿತು.

ಮಾರ್ಚ್ ತಿಂಗಳಿನಲ್ಲಿ ದಿವ್ಯಾಂಗ ಮಕ್ಕಳಿಗಾಗಿ ಕೆಲಸ ಮಾಡುತ್ತಿರುವ ಪ್ರತಿಷ್ಠಾನದ ಮೂರು ಸಂಸ್ಥೆಗಳು (ಸೇವಾ ಇನ್ ಆಕ್ಷನ್, ಅರುಣ ಚೇತನ, ಮನೋನಂದನ) ಒಟ್ಟು ಸೇರಿ ದಿವ್ಯಾಂಗ ಕಲಾವಿಷ್ಕಾರ ಎನ್ನುವ ಕಾರ್ಯಕ್ರಮವನ್ನು ನೆಡೆಸಿಕೊಟ್ಟವು. ತುಂಬಾ ಉತ್ತಮ, ಪ್ರಭಾವಿ ಕಾರ್ಯಕ್ರಮ ಅದಾಯಿತು.

ಶಿಶು ಶಿಕ್ಷಣ, ಸೇವಾಮಿತ್ರ, ಸೇವಾವ್ರತಿಗಳ ಯೋಜನೆಗಳು ವಿಕಾಸವಾಗುತ್ತಿವೆ.

ಇನ್ನುಳಿದ ಪ್ರಕಲ್ಪಗಳ ವರದಿಯನ್ನು ಆಯಾ ವಿಭಾಗಗಳಲ್ಲಿ ನೋಡಬಹುದು

ನಿಮ್ಮವ

**ಸುರೇಶ**
ನಿರ್ದೇಶಕ, ಹಿಂದುಸೇವಾ ಪ್ರತಿಷ್ಠಾನ

# ಸೇವಾವ್ರತಿ

2108–19 ನೇ ಸಾಲಿನಲ್ಲಿ ಎರಡು ಬಾರಿ ಹೊಸ ಸೇವಾವ್ರತಿಗಳ ವರ್ಗ ನಡೆದಿದೆ. 2018ನೇ ಸಾಲಿನ ಮೇ ತಿಂಗಳಿನಲ್ಲಿ ಮುಧೋಳ ತಾಲ್ಲೂಕಿನ ಮಾಲಾಪುರದಲ್ಲಿ ಕೊಲ್ಹಾರ ಶಿಕ್ಷಣ ಸಂಸ್ಥೆಯಲ್ಲಿ 6ದಿನಗಳ ಕಾಲ ಹೊಸ ಸೇವಾವ್ರತಿಗಳಿಗೆ ಶಿಕ್ಷಣ ನಡೆಯಿತು. ಈ ವರ್ಗದಲ್ಲಿ ಶಿಶು ಶಿಕ್ಷಣವನ್ನೇ ಆಧಾರವಾಗಿಟ್ಟುಕೊಂಡು ತರಬೇತಿ ನೀಡಲಾಯಿತು. ಇದೊಂದು ಹೊಸ ಪ್ರಯೋಗ ಒಟ್ಟು ಹನ್ನೊಂದು ಸೇವಾವ್ರತಿಗಳು ಹಾಗೂ ಒಬ್ಬರು ಸ್ಥಾನೀಯರು ಈ ವರ್ಗದಲ್ಲಿ ಪಾಲ್ಗೊಂಡಿದ್ದರು.

2018ರ ಅಕ್ಟೋಬರ್‌ನಲ್ಲಿ ಬೆಂಗಳೂರಿನ ಪಂಚವಟಿ ಯೋಗಕೇಂದ್ರದಲ್ಲಿ ಹೊಸ ಸೇವಾವ್ರತಿಗಳ ಇನ್ನೊಂದು ತಂಡಕ್ಕೆ ತರಬೇತಿ ನೀಡಲಾಯಿತು. ಈ ತಂಡದಲ್ಲಿ 14 ಜನ ತರಬೇತಿ ಪಡೆದು ಕಾರ್ಯಕ್ಷೇತ್ರಕ್ಕೆ ತೆರಳಿದ್ದಾರೆ.

ಈ ವರ್ಷ 48ಜನ ಸೇವಾವ್ರತಿಗಳು (ಮಹಿಳೆಯರು) ಕಾರ್ಯಕ್ರಮದಲ್ಲಿ ಕೆಲಸ ಮಾಡಿದ್ದಾರೆ. ವಿವರಗಳು ಈ ರೀತಿಯಿವೆ ಇವೆ.

| | |
|---|---|
| ಮಂಗಳೂರು ವಿಭಾಗ | 11 |
| ಶಿವಮೊಗ್ಗ ವಿಭಾಗ | 15 |
| ಬೆಂಗಳೂರು ಮಹಾನಗರ | 9 |
| ತುಮಕೂರು ವಿಭಾಗ | 3 |
| ಧಾರವಾಡ ವಿಭಾಗ | 5 |
| ಬೆಳಗಾವಿ ವಿಭಾಗ | 2 |
| ಕಲ್ಬುರ್ಗಿ | 3 |
| | 48 |

| | |
|---|---|
| ಶಿಶು ಶಿಕ್ಷಣ | 9 |
| ಸೇವಾ ಮಿತ್ರ | 19 |
| ಗುರುಕುಲ | 4 |
| ಯೋಗ | 2 |
| ನೆಲೆ/ಆಶ್ರಮಗಳು | 9 |
| ಅಜಿತಶ್ರೀ | 2 |
| ಸೇವಾಇನ್ ಆಕ್ಸನ್ | 2 |
| ಸುಪ್ರಜಾ | 1 |
| | 48 |

2018ರ ಡಿಸೆಂಬರ್‌ನಲ್ಲಿ ಸುತ್ತೂರಿನಲ್ಲಿ ನಡೆದ ರಾ.ಸೇ.ಭಾರತಿಯ ವ್ಯಕ್ತಿತ್ವ ವಿಕಾಸದ 10 ದಿನಗಳ ಶಿಬಿರದಲ್ಲಿ ಸೇವಾಮಿತ್ರ ಯೋಜನೆಯಲ್ಲಿ ತೊಡಗಿದ್ದ ಎಲ್ಲಾ 19 ಸೇವಾವ್ರತಿಗಳೂ ಶಿಕ್ಷಣ ಪಡೆದರು.

2018ರ ನವಂಬರ್‌ನಲ್ಲಿ ರಾ.ಸ್ವ. ಸಂಘದ ಸರಕಾರ್ಯವಾಹರ ಪ್ರವಾಸದ ಸಂದರ್ಭದಲ್ಲಿ ಎಲ್ಲಾ ಮಹಿಳಾ ಪೂರ್ಣಾವಧಿ ಕಾರ್ಯಕರ್ತರಿಗೆ ಬೈಠಕ್ ಏರ್ಪಡಿಸಲಾಗಿತ್ತು. ಮಾ.ಸರಕಾರ್ಯವಾಹ ಸುರೇಶ್‌ಜೋಶಿ

(ಭಯ್ಯಾಜಿ ಜೋಶಿ) ಅವರು ಎರಡು ಅವಧಿಗಳಲ್ಲಿ ಮಾರ್ಗದರ್ಶನ ಮಾಡಿದರು. 40 ಸೇವಾವ್ರತಿಗಳು ಈ ಬೈಠಕ್‌ನಲ್ಲಿ ಪಾಲ್ಗೊಂಡಿದ್ದರು.

**ಅಜಿತಶ್ರೀಯಲ್ಲಿ ಪೂರ್ವಸೇವಾವ್ರತಿಗಳ ಸಮಾವೇಶ:** 2019ರ ಜನವರಿ 13ರಂದು ಬೆಂಗಳೂರಿನಲ್ಲಿರುವ ಪೂರ್ವಸೇವಾವ್ರತಿಗಳ ಸಮಾವೇಶ ನಡೆಯಿತು ಅಜಿತಶ್ರೀಯಲ್ಲಿ. ನಾಲ್ಕುಜನ ಹಿರಿಯ ಪೂರ್ವಸೇವಾವ್ರತಿಗಳೇ ಎಲ್ಲರನ್ನು ಸಂಪರ್ಕಿಸಿ ಸೇರಿಸುವ ಕೆಲಸ ಮಾಡಿದ್ದರು. ಅದಕ್ಕಾಗಿ ವಾಟ್ಸಾಪ್ ಗುಂಪುಗಳೆರಡನ್ನು ರಚಿಸಿದ್ದರು. ಕಾರ್ಯಕ್ರಮದಲ್ಲಿ ಒಟ್ಟು 87 ಪೂರ್ವಸೇವಾವ್ರತಿಗಳು ಭಾಗವಹಿಸಿದ್ದರು. 1981ರ ಮೊದಲ ತಂಡದಲ್ಲಿ ಸೇವಾವ್ರತಿಯಾಗಿ ಹೊರಟವರೂ, ಹಿಂದುಸೇವಾ ಪ್ರತಿಷ್ಠಾನ ಪ್ರಾರಂಭವಾಗುವುದಕ್ಕೂ ಮೊದಲೇ ಪೂರ್ಣಾವಧಿಯಾಗಿದ್ದವರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ವಿಶೇಷ. ಕಾರ್ಯಕ್ರಮ ಬೆಂಗಳೂರಿಗೆ ಸೀಮಿತವಾಗಿದ್ದರೂ ಮೈಸೂರು ತುಮಕೂರು ವಿಭಾಗಗಳಿಂದ ದೂರದ ಮುಂಡರಗಿಯಿಂದಲೂ ಪೂರ್ವಸೇವಾವ್ರತಿಗಳು ಬಂದಿದ್ದರು.





# ಸೇವಾಮಿತ್ರ



ಸೇವಾಮಿತ್ರ ಯೋಜನೆ ಈಗ 6 ತಾಲ್ಲೂಕುಗಳ (ಹೊಸದಾಗಿ ನಿರ್ಮಿತವಾದ ಲಕ್ಷ್ಮೇಶ್ವರ ಸೇರಿ 7 ತಾಲ್ಲೂಕುಗಳ) ಒಂದು ನೂರು ಮಂಡಲಗಳಲ್ಲಿ ಕೆಲಸ ಮಾಡುತ್ತಿದೆ. ಈ ಯೋಜನೆಯಲ್ಲಿ ಒಟ್ಟು ಸೇವಾವ್ರತಿಗಳು ಹಾಗೂ ಸುಮಾರು ಒಂದುನೂರು ಸ್ಥಾನೀಯರು ಕೆಲಸ ಮಾಡುತ್ತಿದ್ದಾರೆ. ಶಾಲೆಗಳಲ್ಲಿ ನಡೆಯುತ್ತಿರುವ ಬಾಲಗೋಕುಲಗಳಿಂದಾಗಿ ಮಕ್ಕಳ ಸಾಮಾನ್ಯ ಜ್ಞಾನ ಹೆಚ್ಚುತ್ತಿರುವುದು, ಮನೆಪಾಠಗಳಿಂದ ಮಕ್ಕಳ ಶೈಕ್ಷಣಿಕ ಪ್ರಗತಿ ಹೆಚ್ಚುತ್ತಿರುವುದು ಅನುಭವಕ್ಕೆ ಬರುತ್ತದೆ. ಮಾತೃಮಂಡಳಿಗಳಲ್ಲಿ ಆಸಕ್ತಿಯಿಂದ ಭಾಗವಹಿಸುವವರ ಸಂಖ್ಯೆಯೂ ಹೆಚ್ಚುತ್ತಿದೆ. ಈ ವರ್ಷ ವಿಸ್ತಾರ ಪೈನಾನ್ಸಿಯರ್ಸ್‌ರವರ ಆರ್ಥಿಕ ಸಹಯೋಗದೊಂದಿಗೆ ಆರು ತಾಲ್ಲೂಕುಗಳಲ್ಲಿ  ಮಂಡಲಗಳ ಸರಕಾರಿ ಶಾಲೆಗಳ ಮಕ್ಕಳ ಆರೋಗ್ಯ ತಪಾಸಣೆ ಹಾಗೂ ಸಮಸ್ಯೆಗಳಿದ್ದ ಮಕ್ಕಳಿಗೆ ಅನುವರ್ತಿ ಚಿಕಿತ್ಸೆಗಳನ್ನು ಮಾಡಿಸಲಾಯಿತು ಸುಮಾರು 5000 ಮಕ್ಕಳಿಗೆ ಇದರಿಂದ ಲಾಭವಾಯಿತು.

ಸೇವಾಮಿತ್ರ ಯೋಜನೆಯ ಅಂತರ್ಗತ ನಡೆಯುತ್ತಿರು ಸೇವಾಚಟುವಟಿಕೆಗಳು ಈ ರೀತಿ ಇವೆ.





ವೃಕ್ಷಾರೋಪಣ, ಶಿರಹಟ್ಟಿ

## ವಾರ್ಷಿಕ ವರದಿ – 2019

| ತಾಲೂಕುಗಳು | ಶಿರಹಟ್ಟಿ | ಶಿಕಾರಿಪುರ | ತೀರ್ಥಹಳ್ಳಿ | ಶೃಂಗೇರಿ | ಕೊಪ್ಪ | ಚಿಕ್ಕಬಳ್ಳಾಪುರ |
|---|---|---|---|---|---|---|
| ಮಂಡಲಗಳು | 27 | 23 | 22 | 4 | 7 | 17 |
| ಗ್ರಾಮಗಳು | 108 | 92 | 88 | 16 | 28 | 68 |
| ಮನೆಪಾಠ | 29 | 24 | 2 | – | 3 | 17 |
| ಬಾಲಗೋಕುಲ | 133 | 81 | 85 | 17 | 29 | 27 |
| ಜೋಳಿಗೆ ಪುಸ್ತಕಾಲಯ | 33 | 22 | 17 | 5 | 6 | 6 |
| ಯುವ/ಕಿಶೋರ ಭಾರತಿ | 2 | 10 | 24 | 1 | – | 3 |
| ಮಾತೃಮಂಡಳಿ | 16 | 1 | – | 2 | 5 | 8 |
| ಸ್ವಸಹಾಯ ಸಂಘ | – | 1 | – | – | 21 | – |
| ಭಜನೆ | 7 | 12 | 8 | 3 | 4 | 16 |
| ಯೋಗ | 5 | – | – | – | – | 4 |
| ಹೊಲಿಗೆ ತರಬೇತಿ | – | 1 | 1 | 3 | 1 | – |






ಇದಲ್ಲದೇ ಸಮಾಜದ ನಡುವೆ ವಿವಿಧರೀತಿಯ ಜಾಗೃತಿಗಳಿಗಾಗಿ ವರ್ಷಪೂರ್ತಿ ಸೇವಾಮಿತ್ರರು ಅನ್ಯಾನ್ಯ ರೀತಿಯಲ್ಲಿ ಚಟುವಟಿಕೆಗಳನ್ನು ನಡೆಸುತ್ತಿರುತ್ತಾರೆ. ಈ ವರ್ಷ ನಡೆದ ಅನ್ಯಾನ್ಯ ಕಾರ್ಯಕ್ರಮಗಳ ಸಂಖ್ಯೆ ಹೀಗಿದೆ.

| | | |
|---|---|---|
| ಶ್ರೀಕೃಷ್ಣಜನ್ಮಾಷ್ಟಮಿ | – | 89 |
| ರಕ್ಷಾಬಂಧನ | – | 307 |
| ದೀಪಪೂಜೆ | – | 82 |
| ಹೊರಸಂಚಾರ | – | 7 |
| ವಿಶ್ವ ಯೋಗದಿನ | – | 53 |
| ಸೇವಾದಿನ | – | 68 |
| ಮಕ್ಕಳಿಗೆ ಶಿಬಿರಗಳು | – | 36 |
| ಬಾಲ ಸಂಗಮ | – | 6 |
| ಭಾರತಮಾತಾ ಪೂಜೆ | – | 64 |
| ಆರೋಗ್ಯ ತಪಾಸಣೆ | – | 16 |
| ವೃಕ್ಷಾರೋಪಣ | – | 23 |
| ಶ್ರಮಸೇವೆ | – | 14 |
| ಕುಟುಂಬ ಪ್ರಬೋಧನ | – | 24 |
| ಗ್ರಾಮವಿಕಾಸ | – | 12 |
| ಸೀಡ್‌ಬಾಲ್ ತಯಾರಿಕೆ | – | 12 |
| ವಿವೇಕಾನಂದ ಜಯಂತಿ | – | 24 |
| | | 837 |







# ದಿವ್ಯಾಂಗ ಮಕ್ಕಳ ಶಾಲೆ

ದಿವ್ಯಾಂಗ ಮಕ್ಕಳ ಸಲುವಾಗಿ 3 ಸಂಸ್ಥೆಗಳು ಕೆಲಸ ಮಾಡುತ್ತಿವೆ.

* * *

## ಅರುಣ ಚೇತನಾ






ಅರುಣ ಚೇತನವು 1987 ರಿಂದ ಕೆಲಸ ಮಾಡುತ್ತಿದೆ. ಈಗ ಒಟ್ಟು 154 ಮಕ್ಕಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಶಾಲೆ ಹಾಗು ವೃತ್ತಿತರಬೇತಿ ವಿಭಾಗಗಳಿವೆ.

ಅರುಣಚೇತನದಲ್ಲಿ ಫಿಸಿಯೋಥೆರಪಿ, ಸ್ಪೀಚ್‌ಥೆರಪಿ, ಸ್ಪೆಷಲ್ ಎಜುಕೇಷನ್, ನಾರ್ಮಲ್ ಎಜುಕೇಷನ್ ಯೋಗಥೆರಪಿಗಳಿಂದ ಶಿಕ್ಷಣ ಕೊಡಲಾಗುತ್ತದೆ. ಸಂಗೀತ, ನೃತ್ಯ, ಕರಕುಶಲ ವಸ್ತುಗಳ ತಯಾರಿಕೆಯು ತರಬೇತಿ ಇದೆ.

ಅರ್ಲಿ ಇಂಟರ್‌ವೆನ್ಷನ್ ಪ್ರೋಗ್ರಾಂನಲ್ಲಿ ಎರಡು ಅಥವಾ ಮೂರು ವರ್ಷಗಳೊಳಗಿನ ಮಕ್ಕಳಿಗೆ (ಅವರನ್ನು ಶಾಲೆಗೆ ಸೇರಿಸಿಕೊಳ್ಳುವಂತಿಲ್ಲ) ಅವಶ್ಯವಿರುವ ತರಬೇತಿಯನ್ನು ವಾರದಲ್ಲಿ ಮೂರುದಿನ ನೀಡಲಾಗುತ್ತದೆ. ವೃತ್ತಿ ತರಬೇತಿ ಕೇಂದ್ರದಲ್ಲಿ ಮರಗೆಲಸ, ಮೊಂಬತ್ತಿ ನಿರ್ಮಾಣ, ಚಾಕ್‌ಪೀಸ್ ನಿರ್ಮಾಣ, ಪೇಪರ್ ಬ್ಯಾಗ್ ನಿರ್ಮಾಣ, ಕಂಪ್ಯೂಟರ್ ಬಳಕೆ ಇತ್ಯಾದಿ ವಿಷಯಗಳ ತರಬೇತಿ ನೀಡಿ ಆರ್ಥಿಕವಾಗಿ ಸ್ವಾವಲಂಬಿ ಜೀವನ ನಡೆಸಲು ಕಲಿಸಲಾಗುತ್ತದೆ. ಆರ್.ಟಿ ನಗರ ಹಾಗೂ ಲಗ್ಗೆರೆಗಳಲ್ಲಿ ಅರುಣಚೇತನ ಶಾಲೆಯ ಶಾಖೆಗಳಿವೆ.

ಪೇಜಾವರ ಮಠದ ಶ್ರೀಗಳಾದ ಪ. ಪೂ ವಿಶ್ವೇಶತೀರ್ಥ ಶ್ರೀಪಾದರು ರಕ್ಷಾಬಂಧನದ ದಿನ ಶಾಲೆಗೆ ಆಗಮಿಸಿ ಆಶೀರ್ವಚನ ನೀಡಿದರು. ಸ್ವಾಮಿಜಿಯವರ ಸಮ್ಮುಖದಲ್ಲಿ ಮಕ್ಕಳು ಭಗವದ್ಗೀತಾ ಪಠನ ಮಾಡಿದರು.

**ಅರುಣಚೇತನದಲ್ಲಿ ಈ ವರ್ಷ ನಡೆದ ಕಾರ್ಯಕ್ರಮಗಳು**

ಗುರುಪೂರ್ಣಿಮೆ, ರಕ್ಷಾಬಂಧನ, ಗಣೇಶ ಚೌತಿ, ಆಯುಧಪೂಜೆ, ಸರಸ್ವತಿ ಪೂಜೆ, ಆಯುರ್ವೇದಿಕ್ ಮೆಡಿಕಲ್ ಕ್ಯಾಂಪ್. ಕಣ್ಣಿನ ಪರೀಕ್ಷೆ, ವಾರ್ಷಿಕ ಕ್ರೀಡಾಕೂಟ, ಅಂಗವಿಕಲರ ದಿನಾಚರಣೆ, ಸೇವಾದಿನ, ವಿಶ್ವಯೋಗದಿನಾಚರಣೆ ಇತ್ಯಾದಿ.

**ಅರುಣಚೇತನದ ಮಕ್ಕಳು ಪಾಲ್ಗೊಂಡ ಕಾರ್ಯಕ್ರಮಗಳು:**

ಲಾಲ್‌ಭಾಗನಲ್ಲಿ ನಡೆದ ಫ್ಲವರ್ ಶೋ, smileysನವರು ಆಯೋಜಿಸಿದ ತಾಂಡವನೃತ್ಯ ಕಾರ್ಯಕ್ರಮ, ದಿವ್ಯಾಂಗ ಕಲಾವಿಷ್ಕಾರ, ವಿಕಲಚೇತನರ ಸಬಲೀಕರಣ ಮತ್ತು ಹಿರಿಯನಾಗರೀಕ ಇಲಾಖೆ ಏರ್ಪಡಿಸಿದ ವಿಕಲಚೇತನ ಮಕ್ಕಳ ಚಿತ್ರಕಲಾ ಮೇಳ, ಮಹಿಳಾ ಮತ್ತು ಮಕ್ಕಳ ಇಲಾಖೆಯವರು ಏರ್ಪಡಿಸಿದ ಕ್ರೀಡಾಕೂಟ, ಶಾಶ್ವತಿ ಸೇವಾಸಮಿತಿ ಆಯೋಜಿಸಿದ ಕ್ರೀಡಾಕೂಟ, ಸೇವಾ ಇನ್ ಆಕ್ಸನ್‌ನವರು ನಡೆಸಿದ ಕ್ವಿಜೆಬಲ್.

**ಸಾಧನೆಗಳು :**

1. ವಿಶ್ವ ಅಂಗವಿಕಲರ ದಿನದಂದು ಅಘಅ  ಯವರು ಆಯೋಜನೆ ಮಾಡಿದ ಕ್ರೀಡಾಕೂಟದಲ್ಲಿ ಅರುಣಚೇತನದ ವಿದ್ಯಾರ್ಥಿಗಳು 4 ಪ್ರಥಮ 4 ದ್ವಿತೀಯ ಹಾಗೂ 4 ತೃತೀಯ ಬಹುಮಾನಗಳನ್ನು ಪಡೆದಿರುತ್ತಾರೆ.

2. ಸ್ಪೆಷಲ್ ಒಲಂಪಿಕ್ಸ್ ಭಾರತ್ ನವರು ಆಯೋಜಿಸಿದ್ದ ವಯಸ್ಕರ ಪ್ಲೋರ್ ಹಾಕಿ ಟೀಂ ಗೆ ಜಿ. ಅಲೆಕ್ಸ್ ಆಯ್ಕೆಯಾಗಿದ್ದು ಪಂಜಾಬ್‌ನಲ್ಲಿ ನಡೆದ ಕ್ರೀಡಾಕೂಟದಲ್ಲಿ ರಾಜ್ಯತಂಡ ಎರಡನೆಯ ಬಹುಮಾನ ಪಡೆಯಿತು.

3. ಕೇರಳದ ಕೊಲ್ಲಂನಲ್ಲಿ ಮಹಿಳಾ ಪ್ಲೋರ್ ಹಾಕಿ ಪಂದ್ಯದ ರಾಜ್ಯ ತಂಡದಲ್ಲಿ ಕುಮಾರಿ ದೀಪಿಕಾ ಪಾಲ್ಗೊಂಡಿದ್ದಳು. ಈ ತಂಡ ಬೆಳ್ಳಿಪದಕ ಪಡೆಯಿತು.

4. ಶಾಶ್ವತಿ ಸೇವಾ ಸಮಿತಿಯವರು ನಡೆಸಿದ ಕ್ರೀಡಾಕೂಟದಲ್ಲಿ ಓಟದ ಸ್ಪರ್ಧೆಯಲ್ಲಿ ಅಲೆಕ್ಸ್ 2ನೇ ಸ್ಥಾನ, ಸಾಗರ್ 3ನೇ ಸ್ಥಾನ, ಶಾಟ್‌ಪುಟ್‌ನಲ್ಲಿ ಅಲೆಕ್ಸ್ 1ನೇ ಸ್ಥಾನ, ಸಾಗರ್ 2ನೇ ಸ್ಥಾನ. ಬಾಲಕಿಯರಲ್ಲಿ ಸುಷ್ಮಾ ಓಟದಲ್ಲಿ 3ನೇ ಸ್ಥಾನ ಹಾಗೂ ಜೂನಿಯರ್ ವಿಭಾಗದ ಓಟದ ಸ್ಪರ್ಧೆಯಲ್ಲಿ ಅಭಿಲಾಷ 2ನೇ ಸ್ಥಾನ ಪಡೆದಿದ್ದಾರೆ.

5. 2012–13 ನೇ ಸಾಲಿನಲ್ಲಿ ಅರುಣಚೇತನ ಶಾಲೆಗೆ 'ಪ್ರಕಾಶ' ಸೇರಿದಾಗ ಅವನಿಗೆ 12 ವರ್ಷ ವಯಸ್ಸು. ಅವನಿಗೆ ಆಗ ಭಾಷೆಯ ಸಮಸ್ಯೆ, ಅರ್ಥಮಾಡಿಕೊಳ್ಳುವ ಸಾಮರ್ಥ್ಯದಲ್ಲಿ ಕೊರತೆ, ಕಲಿಕೆಯಲ್ಲಿ ತೊಂದರೆ, ನಡವಳಿಕೆಯಲ್ಲೂ ತುಂಬಾ ತೊಂದರೆ ಇತ್ತು . ಅವನಿಗೆ ಅಕ್ಷರಾಭ್ಯಾಸದಿಂದ ಶಿಕ್ಷಣ ಪ್ರಾರಂಭಿಸಿ ಸ್ಪೀಚ್ ಥೆರಪಿ, ಯೋಗಥೆರಪಿಗಳನ್ನು ಕೊಡಲಾಯಿತು. ಅವನಲ್ಲಿನ ಚಿತ್ರಕಲೆ ಹಾಗೂ ಕ್ರೀಡೆಗಳ ಬಗೆಗಿನ ಆಸಕ್ತಿ ಗುರುತಿಸಿ ತರಬೇತಿ ನೀಡಲಾಯಿತು. ಅವನು ಅಂತರ್ಶಾಲಾ ಚಿತ್ರಕಲೆ ಹಾಗೂ ಕರಕುಶಲ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದಾನೆ. ಅವನು ಈಗ 10ನೇ ತರಗತಿ ಪರೀಕ್ಷೆಯಲ್ಲಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣನಾಗಿದ್ದಾನೆ.

6. ವೃತ್ತಿ ತರಬೇತಿ ಪಡೆದ 'ಪ್ರಭು' ರಾಜ್ಯ ಭಾ.ಜ.ಪಾ. ಕಛೇರಿಯಲ್ಲಿ ಹೆಲ್ಪರ್ ಆಗಿ ನಿಯುಕ್ತನಾಗಿದ್ದಾನೆ, ಅವನ ಪಾಲಕರೂ ಅದರಿಂದ ಸಂತುಷ್ಟರಾಗಿದ್ದಾರೆ.

7. ವೃತ್ತಿ ತರಬೇತಿ ಪಡೆದ 'ಸಾಗರ್' ಈಗ ಅರುಣಚೇತನ ಶಾಲಾವಾಹನದಲ್ಲಿ ಮಕ್ಕಳನ್ನು ವಾಹನಕ್ಕೆ ಹತ್ತಿಸುವ ಇಳಿಸುವ ಹಾಗೂ ವಾಹನದಲ್ಲಿ ಮಕ್ಕಳನ್ನು ನಿಭಾಯಿಸುವ ಕೆಲಸದಲ್ಲಿ ನಿಯುಕ್ತನಾಗಿದ್ದು ಸಂಪಾದಿಸುತ್ತಿದ್ದಾನೆ.

ಅರುಣಚೇತನದ ಶಿಕ್ಷಕಿಯರ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ಅವರಿಗಾಗಿ ಅನೇಕರೀತಿಯ ಕಾರ್ಯಕ್ರಮಗಳು ಹಾಗೂ ಕಾರ್ಯಾಗಾರಗಳನ್ನು ಏರ್ಪಡಿಸಲಾಗುತ್ತದೆ. ಈ ವರ್ಷ ಅರುಣಚೇತನದಲ್ಲಿ 8 ರೀತಿಯ ಕಾರ್ಯಕ್ರಮಗಳು ನಡೆದಿವೆ. ಅದೇರೀತಿ ಅರುಣಚೇತನದ ಪೋಷಕರಿಗೂ ಒಂದು ದಿನದ ಕಾರ್ಯಾಗಾರ ನಡೆಸಿ ಅವರಿಗೆ ವಿಶೇಷ ಶಿಕ್ಷಣದ ಕುರಿತು ತಿಳಿಸಲಾಯಿತು.



ಈ ವರ್ಷ ತ್ರಿವೇಣಿ ಟರ್ಬೈನ್ಸ್ ನವರು C.S.R ಹಣದಿಂದ ಶಾಲೆಗೆ ಬಸ್ಸನ್ನು ನೀಡಿರುತ್ತಾರೆ.

ಬೆಂಗಳೂರಿನ ಹಲವು ಪ್ರತಿಷ್ಠಿತ ವಿದ್ಯಾಲಯಗಳ ವಿದ್ಯಾರ್ಥಿಗಳು ಪ್ರಾಜೆಕ್ಟ್ ವರ್ಕ್‌ಗಾಗಿ ಅರುಣಚೇತನಕ್ಕೆ ಬರುತ್ತಿರುವುದು ಹೆಮ್ಮೆಯ ವಿಷಯ.

**ಮನೋನಂದನ (ಮಾನಸಿಕ ಸವಾಲು ಹೊಂದಿರುವ ಹಾಗೂ ವಿಶೇಷ ಮಕ್ಕಳ ಪುನಶ್ಚೇತನ ಕೇಂದ್ರ)**



* ಈ ವರ್ಷ ಮನೋನಂದನದ ಮಕ್ಕಳು ಹಲವುರೀತಿಯ ಚಿತ್ರಕಲೆ, ಪೇಟಿಂಗ್ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುತ್ತಾರೆ.
* ಸೇವಾ ಇನ್ ಆಕ್ಷನ್ ಸಂಸ್ಥೆಯವರು ನಡೆಸಿದ ಕ್ವಿಸೆಬಲ್ ಸ್ಪರ್ಧೆಯಲ್ಲಿ ಉಪಾಂತ್ಯದವರೆಗೂ ಹೋಗಿದ್ದಾರೆ.
* ಕಬ್ಬನ್‌ಪಾರ್ಕ್‌ನಲ್ಲಿ ನಡೆದ ಬಾಲೋತ್ಸವ ಕಾರ್ಯಕ್ರಮದಲ್ಲಿ, ಬಸವನಗುಡಿ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ನಡೆದ ಅನಂತನಮನ ಕಾರ್ಯಕ್ರಮದಲ್ಲಿ ನೃತ್ಯಪ್ರದರ್ಶನ ಕೊಟ್ಟಿದ್ದಾರೆ.
* ನಿಮಾನ್ಸ್‌ನಲ್ಲಿ ನಡೆದ ISHACON–2019 ಕಾರ್ಯಕ್ರಮದಲ್ಲಿ ಯಕ್ಷಗಾನ ಪ್ರದರ್ಶನ ಕೊಟ್ಟಿದ್ದಾರೆ.
* ಮನೋನಂದನದಲ್ಲಿ ರಾಷ್ಟ್ರೀಯ ಹಬ್ಬಗಳ ಜೊತೆ ವರಮಹಾಲಕ್ಷ್ಮಿ ಪೂಜೆ, ರಕ್ಷಬಂಧನ, ಶಿಕ್ಷಕರ ದಿನಾಚರಣೆ, ಗಣೇಶಚೌತಿ ಶ್ರೀಕೃಷ್ಣ ಜನ್ಮಾಷ್ಟಮಿ, ತುಳಸಿ ಪೂಜೆ, ಸಂಕ್ರಾಂತಿ, ವಿಶ್ವ ಅಂಗವಿಕಲರ ದಿನಾಚರಣೆ ಇತ್ಯಾದಿ ಕಾರ್ಯಕ್ರಮಗಳು ನಡೆದಿವೆ.
* ಈ ವರ್ಷ ಒಟ್ಟು 13 ಕಾಲೇಜುಗಳ ವಿದ್ಯಾರ್ಥಿಗಳು ಮನೋನಂದನಕ್ಕೆ ಭೇಟಿ ನೀಡಿದರು ಅದರಲ್ಲಿ ಉಜಿರೆಯ S.D.M ಕಾಲೇಜಿನ 3 ವಿದ್ಯಾರ್ಥಿಗಳು ಹದಿನೈದು ದಿನಗಳ ಕಾಲ ಕ್ಲೀನಿಕಲ್ ವರ್ಕ್ ನಡೆಸಿದರು.
* ಮನೋನಂದನದ ಶಿಕ್ಷಕಿಯರು 8 ರೀತಿಯ ಕಾರ್ಯಕ್ರಮ/ ಕಾರ್ಯಾಗಾರಗಳಲ್ಲಿ ಭಾಗವಹಿಸಿ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡಿದ್ದಾರೆ.

# ಯೋಗ ಭಾರತಿ



ಪ್ರತಿಷ್ಠಾನದ ಯೋಗ ವಿಭಾಗವಾದ ಯೋಗಭಾರತಿಯು ಯೋಗಶ್ರೀ, ಪಂಚವಟಿ ಯೋಗಕೇಂದ್ರ ಹಾಗೂ ಯಲಹಂಕ ಯೋಗಕೇಂದ್ರಗಳ ಮೂಲಕ ಕೆಲಸವನ್ನು ಮಾಡುತ್ತಿದೆ. ಇದಲ್ಲದೆ ಸೇವಾಮಿತ್ರ ಚಟುವಟಿಕೆಗಳು ನಡೆಯುತ್ತಿರುವಲ್ಲಿಯೂ ಹಲವುಕಡೆ ಯೋಗ ತರಗತಿಗಳು ನಡೆಯುತ್ತವೆ.

* * *

# ಯೋಗಶ್ರೀ

ಗಿರಿನಗರದಲ್ಲಿರುವ ಯೋಗಶ್ರೀ ಕಟ್ಟಡದಲ್ಲಿ ಪ್ರತಿನಿತ್ಯ ಹತ್ತು ಯೋಗ ತರಗತಿಗಳು ನಡೆಯುತ್ತಿದ್ದು ಭಾಗವಹಿಸುತ್ತಿರುವವರ ಸಂಖ್ಯೆ 932. ಒಟ್ಟು 45 ಜನ ಯೋಗ ಶಿಕ್ಷಕರು ಈ ಕೇಂದ್ರದಲ್ಲಿ ಶಿಕ್ಷಣ ನೀಡುತ್ತಾರೆ. ಇಲ್ಲಿ ಅವಧಿಗಳನ್ನು ತೆಗೆದುಕೊಳ್ಳುವ ಶಿಕ್ಷಕರಿಗೆ ಪ್ರತಿವಾರವೂ ಪ್ರಶಿಕ್ಷಣಗಳು ಇರುತ್ತವೆ. ಈ ವರ್ಷ ಈ ರೀತಿಯಲ್ಲಿ ನಡೆದ ಪ್ರಶಿಕ್ಷಣಗಳ ಸಂಖ್ಯೆ 48. ಅದೇರೀತಿ ಪ್ರತಿತಿಂಗಳೂ ವಿವಿಧಗುಂಪುಗಳಲ್ಲಿ ಕಾರ್ಯಕರ್ತರ ಬೈಠಕ್‌ಗಳು ನಡೆಯುತ್ತವೆ. ಈ ವರ್ಷದಲ್ಲಿ ಈ ರೀತಿಯ ಒಟ್ಟು 37 ಬೈಠಕ್‌ಗಳು ನಡೆದಿವೆ. ದಿನನಿತ್ಯದ ಯೋಗ ತರಬೇತಿಗಳಲ್ಲದೇ ಈ ವರ್ಷ 24 ಯೋಗ ಶಿಬಿರಗಳು ನಡೆದಿದ್ದು ಭಾಗವಹಿಸಿದವರ ಸಂಖ್ಯೆ 1140. ಜೂನ್ ತಿಂಗಳಿನಲ್ಲಿ ವಿಶ್ವಯೋಗದಿನದ ಜಾಗೃತಿಗಾಗಿ ನಡೆದ ಶೊಭಾಯಾತ್ರೆಯಲ್ಲಿ 600 ಜನರು ಭಾಗವಹಿಸಿದ್ದು ಬೈಕ್‌ರ್‍ಯಾಲಿಯಲ್ಲಿ 140 ಜನ ಭಾಗವಹಿಸಿದ್ದರು. ವಿಶ್ವಯೋಗದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದವರ ಸಂಖ್ಯೆ 780. ಯೋಗಶ್ರೀ ನಡೆಸುತ್ತಿರುವ ಇನ್ನೊಂದು ಕಾರ್ಯಕ್ರಮ ಯೋಧನಿಧಿ ಸಮರ್ಪಣೆ. ಈ ವರ್ಷ ನಡೆದ ಕಾರ್ಯಕ್ರದಲ್ಲಿ ಹತ್ತು ಯೋಧರ ಕುಟುಂಬದವರಿಗೆ ನಿಧಿಸಮರ್ಪಣೆ ಮಾಡಲಾಯಿತು. 26–1–2019 ರಂದು ಗಣರಾಜ್ಯೋತ್ಸವದಂದು ಸೈನಿಕರನ್ನು ಗೌರವಿಸಿ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಏರ್–ಮಾರ್ಷಲ್ ಮುರಳಿಯವರು ಭಾಗವಹಿಸಿದ್ದರು. ರಥಸಪ್ತಮಿಯಂದು ನಡೆಯುವ ಸಾಮೂಹಿಕ ಸೂರ್ಯನಮಸ್ಕಾರದಲ್ಲಿ 585 ಜನ ಭಾಗವಹಿಸಿದ್ದರೆ ಪ್ರತಿತಿಂಗಳೂ ನಡೆಯುವ ಸೂರ್ಯಮಿಲನ ಕಾರ್ಯಕ್ರಮದಲ್ಲಿ ಭಾಗವಹಿಸುವವರ ಸಂಖ್ಯೆ 60ಕ್ಕೂ ಹೆಚ್ಚಿರುತ್ತದೆ.

ಯೋಗಶ್ರೀಯಲ್ಲಿ ಯೋಗಕೇಂದ್ರಿತ ಕಾರ್ಯಕ್ರಮಗಳಲ್ಲದೇ ಹಲವುರೀತಿಯ ರಾಷ್ಟ್ರೀಯ, ಧಾರ್ಮಿಕ, ಸಾಮಾಜಿಕ, ಕಾರ್ಯಕ್ರಮಗಳು ನಡೆಯುತ್ತವೆ. ಉದಾ: ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ, ರಕ್ಷಾಬಂಧನ, ಶ್ರೀಕೃಷ್ಣಜನ್ಮಾಷ್ಟಮಿ, ಶಿವರಾತ್ರಿ, ವರ್ಷಕ್ಕೊಮ್ಮೆ ದುರ್ಗಾಹೋಮ, ಪರಿಸರಮಿಲನ, ಬೆಳದಿಂಗಳಕೂಟ... ಇತ್ಯಾದಿ.

ಯೋಗಶ್ರೀಗೆ ಬರುವ ಬಂದುಗಳು ಪ್ರತಿಷ್ಠಾನದ ಅನ್ಯ ಪ್ರಕಲ್ಪಗಳಾದ 'ನೆಲೆ' ಹಾಗೂ 'ಸುಪ್ರಜಾ' ಕ್ಕೆ ಬಲವಾದ ಆಸರೆಯಾಗಿ ನಿಂತಿದ್ದಾರೆ.

## ಪಂಚವಟಿ ಯೋಗಕೇಂದ್ರ



ಯೋಗಶ್ರೀ ಕಡೆಯಿಂದ ನಿರ್ವಹಿಸಲಾಗುವ ಪಂಚವಟಿ ಯೋಗಕೇಂದ್ರದಲ್ಲಿ 2ಯೋಗ ತರಬೇತಿಗಳು ನಡೆಯುತ್ತಿವೆ. ಯೋಗಶ್ರೀ ಕಡೆಯಿಂದ ನಡೆಯುವ ಕೆಲವು ಯೋಗ ಶಿಬಿರಗಳು ಪಂಚವಟಿ ಯೋಗ ಕೇಂದ್ರದಲ್ಲಿ ನಡೆಯುತ್ತವೆ. ವರ್ಷದಲ್ಲೊಮ್ಮೆ ಹೊಸ ಸೇವಾವ್ರತಿಗಳ ತರಬೇತಿ ಶಿಬಿರವೂ ಪಂಚವಟಿ ಯೋಗ ಕೇಂದ್ರದಲ್ಲಿ ನಡೆಯುತ್ತದೆ. ಪ್ರತಿ ವರ್ಷ ಶಿವರಾತ್ರಿಯಂದು ಶಿವನಿಗೆ ರುದ್ರಾಭಿಷೇಕ ನಡೆಯುತ್ತದೆ. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ಇರುತ್ತವೆ. ಇದರಲ್ಲಿ ಸುತ್ತಮುತ್ತಲಿನ ಗ್ರಾಮಗಳ ನೂರಾರು ಬಂಧುಗಳು ಭಾಗವಹಿಸುತ್ತಾರೆ.

## ಯಲಹಂಕ ಯೋಗಕೇಂದ್ರ

ಯಲಹಂಕ ಯೋಗ ಮಂದಿರದಲ್ಲಿ ಪ್ರತಿದಿನ 3 ತರಗತಿಗಳು ನಡೆಯುತ್ತಿದ್ದು ಪಾಲ್ಗೊಳ್ಳುತ್ತಿರುವ ಯೋಗಬಂಧುಗಳ ಸಂಖ್ಯೆ ಸುಮಾರು 100. ಇದಲ್ಲದೆ ಪ್ರತಿ ಗುರುವಾರ ಗೀತಾಧ್ಯಯನ ತರಗತಿ ಮತ್ತು ಶುಕ್ರವಾರ ಸತ್ಸಂಗ ನಡೆಯುತ್ತದೆ. ಸತ್ಸಂಗದಲ್ಲಿ ಬಾಗವಹಿಸುವ ಮಹಿಳೆಯರ ಸಂಖ್ಯೆ 65. ಶನಿವಾರ ಮತ್ತು ಭಾನುವಾರಗಳಂದು ನೃತ್ಯ ತರಗತಿಗಳು ನಡೆಯುತ್ತವೆ.

# ಮಕ್ಕಳ ಮಾರ್ಗದರ್ಶಿ ಕೇಂದ್ರ

ಸಮಸ್ಯಾಗ್ರಸ್ತ ಮಕ್ಕಳು ಬಹುವಿಧ ಸಮಸ್ಯೆಗಳಿಂದ ಬಳಲುತ್ತಿರುತ್ತಾರೆ. ಅವರನ್ನು ಪರೀಕ್ಷಿಸಿದ ನಂತರ ಅವರ ಮುಖ್ಯ ಸಮಸ್ಯೆಯನ್ನು ಗುರುತಿಸಿ ಆ ವರ್ಗಕ್ಕೆ ಅವರನ್ನು ಸೇರಿಸಿ ಚಿಕಿತ್ಸೆ ಕೊಡಲಾಗುತ್ತದೆ. ಇದೆಲ್ಲವೂ ಪರಿಣಿತರ ಮೇಲ್ವಿಚಾರಣೆಯಲ್ಲಿ ನಡೆಯುತ್ತದೆ.

ಹೆಚ್ಚಿನ ಪರೀಕ್ಷೆ ಮತ್ತು ಚಿಕಿತ್ಸೆ ಬೇಕಾದವರನ್ನು KIMS,NIMHANS, Samvidu ಮುಂತಾದ ಕೇಂದ್ರಗಳಿಗೆ ಕಳಿಸಲಾಗುತ್ತದೆ.

ಈ ವರ್ಷ ಕೇಂದ್ರದ ಸಹಾಯ ಪಡೆದ ವಿವಿಧ ಸಮಸ್ಯಾಗ್ರಸ್ತ ಮಕ್ಕಳ ವಿವರಗಳು ಈ ರೀತಿ ಇವೆ.

| | |
|---|---|
| ಬೆಳವಣಿಗೆಯ ಸಮಸ್ಯೆ | 2 |
| ಎ.ಡಿ.ಎಚ್.ಡಿ | 9 |
| ಸ್ವಭಾವದ ಸಮಸ್ಯೆ | 6 |
| ಕಲಿಯುವುದರಲ್ಲಿ ತೊಂದರೆ | 36 |
| ಭಾವನಾತ್ಮಕ ಸಮಸ್ಯೆ | 33 |
| ಮಾತಿನಲ್ಲಿ ಸಮಸ್ಯೆ | 4 |
| ಆಟಿಸಮ್ | 1 |
| ಶಾಲೆ ಬಿಟ್ಟವರು | 2 |
| ಸಮಸ್ಯೆ ಇಲ್ಲದ ಮಕ್ಕಳು | 8 |
| ಇತರರು | 15 |
| | 116 |

ಇವರಲ್ಲಿ 79 ಗಂಡು ಮಕ್ಕಳು, 37 ಹೆಣ್ಣು ಮಕ್ಕಳು.

ಮಕ್ಕಳ ವಿಕಾಸ ಮತ್ತು ಮಾನಸಿಕ ಆರೋಗ್ಯದ ಕುರಿತಾಗಿ ಪಾಲಕರ ತಿಳುವಳಿಕೆ ಹೆಚ್ಚಿಸುವ ದೃಷ್ಟಿಯಿಂದ ಪಾಲಕರಿಗೆ ವರ್ಗವನ್ನು 2018ರ ಜುಲೈನಲ್ಲಿ ಆಯೋಜಿಸಲಾಯಿತು. ಈವರೆಗೆ (ಮಾರ್ಚ್ 2019) ಬೇರೆ ಬೇರೆ ವಿಷಯಗಳ ಮೇಲೆ 7 ಬಾರಿ ವರ್ಗ ನಡೆದಿದೆ. ಈ ವರ್ಗಗಳ ನಂತರ ತಮ್ಮ ಆತಂಕ ಕಡಿಮೆಯಾಗಿದೆ ಎಂದು ಪಾಲಕರ ಅನಿಸಿಕೆ. ಪಾಲಕರೇ ತಿಳಿಸಿದಂತೆ ಅವರ ಅರಿವಿಗೆ ಬಂದ ವಿಷಯಗಳು "ಪ್ರತಿ ಸಮಸ್ಯೆಗೂ ಪರಿಹಾರವಿದೆ, ಸಮಸ್ಯೆ ನಮಗೆ

ಮಾತ್ರ ಬರುತ್ತಿಲ್ಲ ಬೇರೆಯವರಿಗೂ ಇದೆ, ಆಟಗಳಿಗೆ ಇರುವ ಮಹತ್ವ, ಸಮಸ್ಯೆಗಳ ಕುರಿತು ಚಿಂತಿಸುವುದಕ್ಕಿಂತ ಪರಿಹಾರದ ಕುರಿತು ಚಿಂತಿಸಬೇಕು. ಮಕ್ಕಳು ನಾವು ಮಾಡುವುದನ್ನು ನೋಡಿ ಕಲಿಯುತ್ತಾರೆ–ನಾವು ಹೇಳಿದ್ದನ್ನು ಕೇಳಿ ಅಲ್ಲ".. ಇತ್ಯಾದಿ.

**ಸಲಹೆಕಾರರು ನಡೆಸಿದ ಅನ್ಯಕಾರ್ಯಕ್ರಮ/ಕಾರ್ಯಾಗಾರಗಳು**

1) ಚಿಲ್ಡ್ರನಿಂಗ್‌ದ ಪೇರೆಂಟ್ಸ್ – ಪಾಲಕರಿಗೆ
2) ನಿಮ್ಮ ಮಕ್ಕಳನ್ನು ಅರ್ಥೈಸಿಕೊಳ್ಳುವುದು – ಪಾಲಕರಿಗೆ ಕಾರ್ಯಾಗಾರ

**ಸಲಹೆಕಾರರು ಭಾಗವಹಿಸಿದ ಕಾರ್ಯಕ್ರಮ/ಕಾರ್ಯಗಾರಗಳು**

1) ಶಿಕ್ಷಣದ ಹಕ್ಕು : ಎರಡುದಿನಗಳ ಕಾರ್ಯಗಾರ. ಭಗಿನಿ ಆರತಿ ಹಾಗೂ ಭಗಿನಿ ಸಿಂಧು ಭಾಗವಹಿಸಿರುತ್ತಾರೆ.
2) ಶಿಕ್ಷಕರಿಗೆ ಹಾಗೂ ಪಾಲಕರಿಗೆ ಕ್ರಿಯೆಟಿವಿಟಿ ವರ್ಕ್‌ಶಾಪ್:– ನಡೆಸಿದವರು, ಭಗಿನಿ ಆರತಿ ಹಾಗೂ ಭಗಿನಿ ಸಿಂಧು.
3) ವೃತ್ತಿಪರ ಹಾಗೂ ಶೈಕ್ಷಣಿಕ ಹಬ್ಬ, ವಿಶೇಷ ಮಕ್ಕಳಿಗಾಗಿ:– ಭಾಗವಹಿಸಿದವರು ಭಗಿನಿ ವತ್ಸಲಾ ಮತ್ತು ಅನಿತ



# ಪ್ರಸನ್ನ ಆಪ್ತಸಲಹಾ ಕೇಂದ್ರ

## ಅಜಿತಶ್ರೀ ಕೇಂದ್ರ

ಅಜಿತ ಶ್ರೀ ಕಟ್ಟಡದ ಪುನಾರಚನೆಯ ಕೆಲಸ 2018– 19ರಲ್ಲಿ ನಡೆಯುತ್ತಿದ್ದರಿಂದ ಪ್ರಸನ್ನ ಆಪ್ತ ಸಲಹಾಕೇಂದ್ರವು ವಾಣಿ ವಿಲಾಸ ರಸ್ತೆಯಲ್ಲಿದ್ದ ವಾಸವಿ ವಿದ್ಯಾನಿಕೇತನ ಶಾಲೆಯಲ್ಲಿ ತನ್ನ ಕಾರ್ಯವನ್ನು ನಡೆಸಿತು. ಈ ಕಾರಣಕ್ಕಾಗಿ ವಾಸವಿ ವಿದ್ಯಾನಿಕೇತನ ಶಾಲೆಯ ಪದಾಧಿಕಾರಿಗಳಿಗೆ ನಾವು ಚಿರಋಣಿಗಳು.

2018ರ ಫೆಬ್ರವರಿ 2ರಿಂದ ಜೂನ್ 2ರವರೆಗೆ 44ನೆಯ ಆಪ್ತಸಲಹೆಗಾರರ ತರಬೇತಿ ವರ್ಗವು ನಡೆಯಿತು. ಸಾಫ್ಟ್‌ವೇರ್ ಇಂಜನೀಯರ್ಸ್, ಟೀಚರ್ಸ್, ಗೃಹಿಣಿಯರು, ವಿದ್ಯಾರ್ಥಿಗಳಿಂದ ಕೂಡಿದ 107 ಜನ ಈ ತರಬೇತಿ ವರ್ಗದಲ್ಲಿ ಪಾಲ್ಗೊಂಡರು. ಸಮಾರೋಪ ಕಾರ್ಯಕ್ರಮದಲ್ಲಿ ಎಲ್ಲರಿಗೂ ಪ್ರಮಾಣಪತ್ರ ವಿತರಿಸಲಾಯಿತು.

ಈ ವರ್ಷ ಆಪ್ತಸಲಹಾಕೇಂದ್ರದ ಪ್ರಮುಖರಾದ ಭಗಿನಿ ಎಂ.ಸಿ ಪಂಕಜಾ ಅವರಿಗೆ ರೋಟರಿ ಸಂಸ್ಥೆಯವರ ರೋಟರಿ ಎಕ್ಸಲೆನ್ಸ್ ಅವಾರ್ಡ್ ಹಾಗೂ ರೋಟರಿ ಮಾರ್ಗದರ್ಶಿ ಅವಾರ್ಡ್‌ಗಳು ದೊರತಿವೆ. ಇದು ಪ್ರತಿಷ್ಠಾನಕ್ಕೆ ಒಂದು ಹೆಮ್ಮೆಯ ವಿಷಯ.

ಈ ವರ್ಷ ಆಪ್ತಸಲಹಾಕೇಂದ್ರದ ವೆಬ್‌ಸೈಟ್ ಸಂದರ್ಶಿಸಿದವರು 60000ಕ್ಕೂ ಹೆಚ್ಚು ಜನ.

2018–19ರಲ್ಲಿ ಪ್ರಸನ್ನ ಆಪ್ತಸಲಹಾಕೇಂದ್ರದಿಂದ ಲಾಭಪಡೆದವರ ವಿವರ ಈ ರೀತಿ ಇದೆ .

| | |
|---|---|
| ಶಾರೀಕ ಸಮಸ್ಯೆಗಳಿಂದ ಕೂಡಿದವರು | 39 |
| ಮಾನಸಿಕ ಸಮಸ್ಯೆಗಳಿಂದ ಕೂಡಿದವರು | 452 |
| ವೈವಾಹಿಕ ಜೀವನದ ಸಮಸ್ಯೆಗಳು | 59 |
| ಆತ್ಮಹತ್ಯಾ ಪ್ರವೃತ್ತಿ | 1 |
| ಮಾದಕ ವಸ್ತು ಸೇವನೆ | 10 |
| ವ್ಯಾವಹಾರಿಕ ಸಮಸ್ಯೆಗಳು | 210 |
| ಶೈಕ್ಷಣಿಕ ಸಮಸ್ಯೆಗಳು | 197 |
| ಪುನರ್ವಸತಿ ಸಮಸ್ಯೆ | 28 |
| | 996 |



ಇಂಟರ್ನ್‌ಶಿಪ್‌ಗಾಗಿ ಅನ್ಯಾನ್ಯ ವಿದ್ಯಾಲಯಗಳಿಂದ ಬರುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ.

* * *

# ದೇವಯ್ಯ ಪಾರ್ಕ್

ಸಲಹಾಕೇಂದ್ರದ ಕಾರ್ಯಕರ್ತರು ಸುತ್ತಮುತ್ತಲಿನ ಮನೆಗಳು ಹಾಗೂ ಶಾಲೆಗಳನ್ನು ಸಂಪರ್ಕಿಸಿ ಕರಪತ್ರಗಳನ್ನು ವಿತರಿಸಿ ಸಲಹಾಕೇಂದ್ರದ ಕುರಿತು ತಿಳಿಸಿದ್ದಾರೆ. ಪರಿಣಾಮವಾಗಿ ಸಮಸ್ಯೆಗಳು ಎದುರಾದಾಗ ಸಲಹಾಕೇಂದ್ರದ ಸಹಾಯ ಪಡೆಯಬಯಸುವವರ ಸಂಖ್ಯೆ ಹೆಚ್ಚುತ್ತಿದೆ.

ಲಗ್ಗೆರೆಯಲ್ಲಿ ಸಲಹಾಕೇಂದ್ರ ಶಾಖೆಯನ್ನು ತೆರೆದು ನೆಲೆಯ ಮಕ್ಕಳಿಗೆ ಸಲಹಾಕೇಂದ್ರದ ಸೌಲಭ್ಯ ದೊರಕಿಸಲಾಗುತ್ತಿದೆ.

ಈ ವರ್ಷ ದೇವಯ್ಯ ಪಾರ್ಕ್ ಕೇಂದ್ರದಿಂದ ಸಹಾಯ ಪಡೆದ ವಿವರಗಳು

| | |
|---|---|
| ಶಾರೀರಿಕ ಸಮಸ್ಯೆ | 1 |
| ಮಾನಸಿಕ ಸಮಸ್ಯೆ | 16 |
| ವೈವಾಹಿಕ | 10 |
| ಶೈಕ್ಷಣಿಕ | 129 |
| ಒಟ್ಟು | 156 |



**ಯಶೋಗಾಥೆಗಳು :**

1) 2018ರ ಜನವರಿಯಲ್ಲಿ ತಾಯಿಯೊಬ್ಬರು 10ನೇ ತರಗತಿಯಲ್ಲಿ ಓದುತ್ತಿರುವ ತಮ್ಮ ಮಗಳನ್ನು ಕೇಂದ್ರಕ್ಕೆ ಕರೆತಂದರು. ಅವರಿಗೆ ತಮ್ಮ ಮಗಳ ಏಕಾಗ್ರತೆಯ ಕುರಿತು ಚಿಂತೆ. 10ನೇ ತರಗತಿ ಪರೀಕ್ಷೆಗಳು ಹತ್ತಿರಬರುತ್ತಿರುವುದು ಆಕೆಯ ಚಿಂತೆಗೆ ಕಾರಣವಾಗಿತ್ತು. ಆಕೆಯ ಮಗಳಿಗೆ ಹಲವುಬಾರಿ ವೈಯಕ್ತಿಕವಾಗಿ ಆಪ್ತಸಲಹೆ ನೀಡಲಾಯಿತು. ದೂರವಾಣಿ ಮೂಲಕವೂ ಮಾತುಕತೆ ನಡೆಸಲಾಯಿತು. ಪರೀಕ್ಷೆ ಎದುರಿಸುವುದರ ಕುರಿತು ಕೆಲವು ಸಲಹೆ ನೀಡಲಾಯಿತು. ಆ ಹುಡುಗಿ ಪರೀಕ್ಷೆಯಲ್ಲಿ 92.5 % ಅಂಕ ತೆಗೆದುಕೊಂಡಳು. ಮುಂದಿನ ಓದಿನ ಬಗ್ಗೆ ಸಲಹೆ ಪಡೆಯಲು ಅವಳಾಗಿಯೇ ಕೇಂದ್ರಕ್ಕೆ ಬಂದಳು. ಪ್ರಥಮ ಪಿ.ಯು.ಸಿ ಪರೀಕ್ಷೆಯಲ್ಲಿ ಆಕೆ 97% ಅಂಕಗಳೊಡನೆ ಉತ್ತೀರ್ಣಳಾಗಿದ್ದಾಳೆ.

2) ತಾಯಿ ತನ್ನ ಬೆಳೆದ ಮಗನೊಡನೆ ಕೇಂದ್ರಕ್ಕೆ ಬಂದಳು. ಮಗ ಮತ್ತು ಸೊಸೆಯ ಸಂಬಂಧ ಚೆನ್ನಾಗಿಲ್ಲ ಇಬ್ಬರೂ ಜಗಳವಾಡುತ್ತಾರೆ. ಸೊಸೆ ವಿಚ್ಛೇದನಕ್ಕೆ ಪ್ರಯತ್ನಿಸುತ್ತಿದ್ದಾಳೆ ಎಂಬುದು ಆಕೆಯ ಆತಂಕ. ಕೇಂದ್ರದಲ್ಲಿ

ಮನೆಯ ಎಲ್ಲಾ ಸದಸ್ಯರೊಂದಿಗೆ ಮಾತುಕತೆ ನಡೆಸಲಾಯಿತು. ಮಗನ ಆದಾಯ ಕಡಿಮೆ ಇರುವುದು, ಆತನ ಸಂಶಯ ಪ್ರವೃತ್ತಿ ಹಾಗೂ ಅವಾಚ್ಯ ಶಬ್ದಗಳ ಬಳಕೆ ಇವು ಆತನ ಹೆಂಡತಿಗೆ ಘಾಸಿಮಾಡಿದ್ದವು. ಆಕೆಯ ಅಪಕ್ವ ವ್ಯವಹಾರ, ಅಸಹಕಾರ ಹಾಗೂ ಮನೆಯಲ್ಲಿ ಉತ್ತಮ ಹಿರಿತನ ಯಾರಲ್ಲೂ ಇಲ್ಲದಿರುವುದು ಸಮಸ್ಯೆಗೆ ಕಾರಣವಾಗಿತ್ತು. ಮತ್ತೆ ಮತ್ತೆ ಸಲಹಾ ಕೇಂದ್ರಕ್ಕೆ ಕರೆಸಿಕೊಂಡು ಸಲಹೆಗಳನ್ನು ನೀಡಿದ್ದರಿಂದ ಈಗ ಮನೆಯಲ್ಲಿ ಶಾಂತಿ ನೆಲೆಸಿದೆ.

# ಮಲ್ಲೇಶ್ವರಂ ಸಲಹಾಕೇಂದ್ರ

2109ರ ಜುಲೈನಿಂದ ಜನವರಿ ವರೆಗೆ ನಡೆದ 15ನೇ ಆಪ್ತಸಲಹಾಕಾರರ ತರಬೇತಿ ವರ್ಗದಲ್ಲಿ 80ಜನ ಭಾಗವಹಿಸಿದರು. ಈ ವರ್ಷ ಮಲ್ಲೇಶ್ವರ ಸಲಹಾಕೇಂದ್ರದಿಂದ ಆಪ್ತಸಲಹೆಯ ಪ್ರಯೋಜನ ಪಡೆದವರ ಸಂಖ್ಯೆ 100. ಮಲ್ಲೇಶ್ವರ ಆಪ್ತಸಲಹಾಕೇಂದ್ರದ ಕಡೆಯಿಂದ ಅನೇಕರೀತಿಯ ವರ್ಗಗಳು ಹಾಗೂ ಕಾರ್ಯಾಗಾರಗಳು ಬೇರೆ ಬೇರೆ ಸ್ಥಳಗಳಲ್ಲಿ  ನಡೆದಿವೆ. ವಿವರಗಳು ಈ ರೀತಿ ಇವೆ.

1) **ಹೈಸ್ಕೂಲು ಮಕ್ಕಳಿಗೆ ಜೀವನ ಕೌಶಲ್ಯ ಕಾರ್ಯಾಗಾರ :** ವಿಜಯ ಶಾಲೆ–ಹಾಸನ, ಕ್ಲಾರೆಂಟ್ ಇಂಗ್ಲೀಷ್ ಶಾಲೆ–ತುಮಕೂರು, ವಿದ್ಯಾಪೋಷಕ ಸಂಸ್ಥೆ ಧಾರವಾಡ, ಸೇವಾಸದನದ ಮಕ್ಕಳು ಮಲ್ಲೇಶ್ವರ, ಎಂ.ಇ.ಎಸ್ ಕಿಶೋರಕೇಂದ್ರ–ಮಲ್ಲೇಶ್ವರ.

2) **ಪಾಲಕರಿಗೆ ಪಾಲಕತ್ವ(ಪೇರೆಂಟಿಂಗ್)  ಕಾರ್ಯಾಗಾರ :** ವಿಜಯ ಶಾಲೆ –ಹಾಸನ, ಕ್ಲಾರೆಂಟ್ ಇಂಗ್ಲೀಷ್ ಶಾಲೆ–ತುಮಕೂರು, ವಿದ್ಯಾಪೋಷಕ ಸಂಸ್ಥೆ– ಧಾರವಾಡ, ಪವರ್ ಇಕ್ವಿಪ್‌ಮೆಂಟ್ ಕಂಪನಿಯ ಉದ್ಯೋಗಿಗಳು–ಚಿಕ್ಕಗೊಂಡನಪಾಳ್ಯ.

3) **ಪರೀಕ್ಷಾ ನಿರ್ವಹಣೆ ಶಿಬಿರ :** 10ನೇ ತರಗತಿ ಮಕ್ಕಳು ಸರ್ಕಾರಿ ಪ್ರೌಢಶಾಲೆ ದೊಮ್ಮಲೂರು.

4) ಕೇಂದ್ರದ 8–9 ಸಲಹೆಕಾರರು 'ಸುಚಿತ್ಕರ್ಷ' ಎಂಬ ತಂಡವನ್ನು ರಚಿಸಿಕೊಂಡು ಒಂದು ಸರಕಾರಿ ಪ್ರೌಢಶಾಲೆಗೆ ನಿಯಮಿತವಾಗಿ ಹೋಗುತ್ತಾರೆ. ಸಲಹೆಕಾರರ ಒಡನಾಟದಿಂದಾಗಿ ಮಕ್ಕಳ ವರ್ತನೆಯಲ್ಲಿ ತುಂಬಾ ಬದಲಾವಣೆ ಬಂದಿದ್ದು ಮುಂದಿನ ವರ್ಷವೂ ನೀವು ಬನ್ನಿ ಎಂದು ಅಲ್ಲಿನ ಅಧ್ಯಾಪಕ ವೃಂದ ಕೇಳಿದೆ.

# ನೆಲೆ

ಪ್ರಾಂತದಲ್ಲಿ ಒಟ್ಟು 8 ನೆಲೆಗಳಿವೆ.

| | | |
|---|---|---|
| ಶಿವಮೊಗ್ಗ – | ಮಾಧವನೆಲೆ | – ಗಂಡು ಮತ್ತು ಹೆಣ್ಣು ಮಕ್ಕಳಿಗಾಗಿ |
| ತುಮಕೂರು – | ದ್ವಾರಕ ನೆಲೆ | – ಹೆಣ್ಣುಮಕ್ಕಳಿಗಾಗಿ |
| ಮೈಸೂರು – | ಅಜಿತನೆಲೆ | – ಗಂಡುಮಕ್ಕಳಿಗಾಗಿ |
| ಬೆಂಗಳೂರು – | ನರೇಂದ್ರ ನೆಲೆ | – ಗಂಡುಮಕ್ಕಳಿಗಾಗಿ |
| | ಚಂದನ ನೆಲೆ | – ಗಂಡುಮಕ್ಕಳಿಗಾಗಿ |
| | ನಮ್ಮ ಮನೆ ನೆಲೆ | – ಗಂಡು ಮಕ್ಕಳಿಗಾಗಿ |
| | ನಿವೇದಿತಾ ನೆಲೆ | – ಹೆಣ್ಣುಮಕ್ಕಳಿಗಾಗಿ |
| | ಆಶಾಕಿರಣ ನೆಲೆ | – ಹೆಣ್ಣುಮಕ್ಕಳಿಗಾಗಿ |

ಎಲ್ಲಾ ನೆಲೆಗಳೂ ನೆಲೆಫೌಂಡೇಷನ್ ಎಂಬ ನೊಂದಾಯಿತ ಟ್ರಸ್ಟ್ ಅಡಿಯಲ್ಲಿ ಕೆಲಸಮಾಡುತ್ತವೆ. ಶಿವಮೊಗ್ಗದ ಮಾಧವನೆಲೆ ಅಲ್ಲಿನ ವಿಕಾಸ ಟ್ರಸ್ಟ್ ಅಡಿಯಲ್ಲಿ ಕೆಲಸ ಮಾಡುತ್ತದೆ.

ಸಾಮಾನ್ಯವಾಗಿ ನೆಲೆಯಲ್ಲಿರುವವರು ಸಂಪೂರ್ಣ ಅನಾಥರು, ಅಥವಾ ತಂದೆ ತಾಯಿ ಯಾರಾದರು ಒಬ್ಬರು ಮಾತ್ರ ಇರುವವರು ಹಾಗೂ ತೀರಾ ಬಡವರು. ಸಾಮಾನ್ಯವಾಗಿ ಇವರೆಲ್ಲಾ ತೀರಾ ಹಿಂದುಳಿದ ವರ್ಗಗಳಿಂದ ಬಂದಿದ್ದು ಶಿಕ್ಷಣದಲ್ಲಿ , ಆರೋಗ್ಯದಲ್ಲಿ, ನಡವಳಿಕೆಗಳಲ್ಲಿ ತುಂಬಾ ಹಿಂದುಳಿದವರೇ ಆಗಿರುತ್ತಾರೆ. ಇಂತಹ ಮಕ್ಕಳನ್ನು ನೆಲೆಗೆ ತಂದು ಅವರಿಗೆ ವಸತಿ, ಚಿಕಿತ್ಸೆ, ಶಿಕ್ಷಣ, ಆರೋಗ್ಯ ಎಲ್ಲವನ್ನು ಉಚಿತವಾಗಿ ನೀಡಿ ಅವರನ್ನೆಲ್ಲ ಸ್ವಾವಲಂಬಿ ಜೀವನ ನಡೆಸುವಂತೆ ಮಾಡುವುದು ಹಾಗೂ ಸಮಾಜದ ಮುಖ್ಯ ಪ್ರವಾಹಕ್ಕೆ ಕರೆತಂದು ಯೋಗ್ಯ ನಾಗರೀಕರನ್ನಾಗಿ ಮಾಡುವುದು ನೆಲೆಯ ಕಾರ್ಯ.

ನೆಲೆಯಲ್ಲಿರುವ ಮಕ್ಕಳ ದಿನಚರಿ ಬೆಳಗ್ಗೆ 5.00 ರಿಂದ ಪ್ರಾರಂಭವಾಗಿ ರಾತ್ರಿ 9.00ರವರೆಗೆ ಎಲ್ಲವೂ ನಿರ್ದಿಷ್ಟ ಸಮಯದಲ್ಲಿ ವ್ಯವಸ್ಥಿತವಾಗಿ ನಡೆಯುತ್ತವೆ. ಬೆಳಗ್ಗೆ 5.00 ಕ್ಕೆ ಎದ್ದು ಪ್ರಾತರ್ವಿಧಿ ನಂತರ ಒಟ್ಟಾಗಿ ಏಕಾತ್ಮತಾ ಸ್ತೋತ್ರ, ಯೋಗಾಸನ, ಸ್ವಚ್ಛತಾಕಾರ್ಯ, ಸ್ನಾನ, ಉಪಾಹಾರ, ಶಾಲೆ, ಸಂಜೆ ಆಟ, ಭಜನೆ

ಹಾಗೂ ಅಧ್ಯಯನಗಳು ಯೋಜನೆಯಂತೆ ನಡೆಯುತ್ತವೆ. ಸಂಜೆಯೂ ವಿಶೇಷ ಪಾಠ ಮಾಡಲಾಗುತ್ತದೆ. ಇದರ ಜೊತೆಯಲ್ಲಿ ಅವರವರ ಅಭಿರುಚಿಗೆ ತಕ್ಕಂತೆ ಸಂಗೀತ, ನೃತ್ಯ, ಗಮಕ, ಯಕ್ಷಗಾನ ಇತ್ಯಾದಿ ಯಾವುದಾದರೊಂದು ಲಲಿತಕಲೆಯ ಅಭ್ಯಾಸವೂ ನಡೆಯುತ್ತದೆ.

ಇದರ ಜೊತೆಯಲ್ಲಿ ಎಲ್ಲಾ ನೆಲೆಗಳಲ್ಲಿ ರಾಷ್ಟ್ರೀಯ ಹಬ್ಬಗಳು ಹಾಗೂ ನಮ್ಮ ಸಂಸ್ಕೃತಿಯ ಎಲ್ಲಾ ಹಬ್ಬಗಳನ್ನು ಆಚರಿಸಲಾಗುತ್ತದೆ. ಕೆಲವೊಮ್ಮೆ ವಿಶೇಷದಿನಗಳಂದು ನೆಲೆಯ ಮಕ್ಕಳು ಹಿತೈಷಿಗಳ ಮನೆಗೆ ಹಬ್ಬಕ್ಕಾಗಿಯೇ ಹೋಗುವುದೂ ಇರುತ್ತದೆ. ಸುತ್ತಮುತ್ತಲಿನ ಸಮಾಜ ಬಾಂಧವರು ತಮ್ಮ ಮನೆಯ ವಿಶೇಷದಿನಗಳನ್ನು ನೆಲೆಗೇ ಬಂದು ಆಚರಿಸುವುದೂ ಇದೆ. ಕಳೆದ ವರ್ಷದಂತೆ ಈ ವರ್ಷವೂ ದೀಪಾವಳಿಯನ್ನು ನ್ಯೂ ಹೊರೈಸನ್ ಸಂಸ್ಥೆಯ ಆವರಣದಲ್ಲಿ ಆಚರಿಸಲಾಯಿತು. ಸಂಸ್ಥೆಯವರು ಮಕ್ಕಳಿಗೆ ಹೊಸವಸ್ತ್ರಗಳು ಮತ್ತು ಉಡುಗೊರೆಗಳನ್ನು ನೀಡಿದರು.

**ನರೇಂದ್ರ ನೆಲೆ :**

* 2018ರ ಅಕ್ಟೋಬರ್‌ನಲ್ಲಿ ಎಲ್ಲಾ ನೆಲೆಯ ಮಕ್ಕಳನ್ನು ಸೇರಿಸಿ 3 ದಿನಗಳ ವ್ಯಕ್ತಿತ್ವ ವಿಕಾಸ ಶಿಬಿರವನ್ನು ಆಯೋಜಿಸಲಾಯಿತು. ಭಗಿನಿ ಶ್ರೀ ವಿದ್ಯಾ, ಭಗಿನಿ ಪರಿಮಳ ಮೂರ್ತಿ ಹಾಗೂ ಅವರ ಜೊತೆಗಾರರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು,



* 2018ರ ಡಿಸೆಂಬರ್ ನಲ್ಲಿ ನರೇಂದ್ರ ನೆಲೆಯಲ್ಲಿ ಸೇವಾದಿನದ ಕಾರ್ಯಕ್ರಮ ನಡೆಯಿತು. ಪ್ರಸನ್ನ ಆಪ್ತಸಲಹಾ ಕೇಂದ್ರದ ಒಂದು ಶಾಖೆಯನ್ನು ಅಲ್ಲಿ ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಸ್ಥಳೀಯ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು, ಸಭಾಕಾರ್ಯಕ್ರಮದ



ನಂತರ ನೆಲೆಯ ಮಕ್ಕಳ ಪ್ರತಿಭಾ ಪ್ರದರ್ಶನದ ಕಾರ್ಯಕ್ರಮ ನಡೆಯಿತು,

* 2018ರ ಏಪ್ರಿಲ್‌ನಲ್ಲಿ ನರೇಂದ್ರನೆಲೆಯ ಮಕ್ಕಳ ಪಾಲಕರಿಗಾಗಿ ವಿಶೇಷ ವರ್ಗ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಪಾಲಕರಿಗಾಗಿ ದೀಪಪೂಜೆ, ಗೋಪೂಜೆ, ಭಾರತಮಾತಾಪೂಜೆ ಹಾಗೂ ಮಕ್ಕಳಿಂದ ಪಾಲಕರ ಪಾದಪೂಜೆ ಕಾರ್ಯಕ್ರಮಗಳನ್ನು ಜೋಡಿಸಲಾಗಿತ್ತು. ಈ ಕಾರ್ಯಕ್ರಮದಿಂದ ಎಲ್ಲರೂ ಪ್ರಭಾವಿತರಾದರು.
* ನೆಲೆಯ ಎಲ್ಲಾ ಮಕ್ಕಳ ಆರೋಗ್ಯ ತಪಾಸಣೆ ಹಾಗೂ ಕಣ್ಣಿನ ತಪಾಸಣೆ ಮಾಡಲಾಯಿತು.

## ನಿವೇದಿತಾ ನೆಲೆ:

ನಿವೇದಿತಾ ನೆಲೆಯ ಯೋಗಕ್ಷೇಮವನ್ನು ಯೋಗಶ್ರೀ ಬಂಧುಗಳು ನೋಡಿಕೊಳ್ಳುತ್ತಾರೆ.

* ಏಪ್ರಿಲ್ ತಿಂಗಳಲ್ಲಿ ನೆಲೆಯ ಮಕ್ಕಳಿಗಾಗಿ ಯೋಗಶ್ರೀಯಲ್ಲಿ ಎರಡು ದಿವಸ ಶಿಬಿರವನ್ನು ನೆಡಸಲಾಯಿತು. ಅದೇರೀತಿ ನಿವೇದಿತಾ ನೆಲೆ ಹಾಗೂ ಆಶಾಕಿರಣ ನೆಲೆಗಳ ಮಕ್ಕಳ ಸಾಮೂಹಿಕ ಹುಟ್ಟುಹಬ್ಬವನ್ನು ಯೋಗಶ್ರೀಯಲ್ಲಿ ಆಚರಿಸಲಾಯಿತು.
* ವಿನಾಯಕ ಬಡಾವಣೆಯ ಗಣೇಶೋತ್ಸವದಲ್ಲಿ ನೆಲೆಯ ಮಕ್ಕಳ ನೃತ್ಯಕ್ಕೆ ಪ್ರಥಮಸ್ಥಾನ ದೊರಕಿದೆ.
* 'ವಿಮ್ ಕೇರ್' ಕಂಪನಿಯ ಪರಿಚಯಕ್ಕಾಗಿ ನೆಲೆಯ ಮಕ್ಕಳು ಹೋಗಿದ್ದರು. ಅಲ್ಲಿ ಮಕ್ಕಳಿಗೆ ರಸಪ್ರಶ್ನೆ ಕಾರ್ಯಕ್ರಮ ನಡೆಯಿತು.
* ಸೆಪ್ಟಂಬರ್‌ನಲ್ಲಿ ನೆಲೆಯಲ್ಲಿ ಶ್ರೀಕೃಷ್ಣಜನ್ಮಾಷ್ಟಮಿ ವೈಭವದಿಂದ ಜರುಗಿತು. ಅಂದು ಸಂಜೆ ವಿಶ್ವಹಿಂದು ಪರಿಷತ್ತಿನ ಕಾರ್ಯಕರ್ತರ ಜೊತೆಯಲ್ಲಿ ಶೋಭಾಯಾತ್ರೆ ನೆಡೆಯಿತು. ಮಕ್ಕಳಿಗೆ ರಾಧೆ, ಕೃಷ್ಣರ ವೇಷ ಹಾಕಲಾಗಿತ್ತು. ಮೆರವಣಿಗೆಗೆ ಸ್ಥಾನೀಯ ಮಹಿಳೆಯರು ಕಲಶಗಳೊಂದಿಗೆ ಬಂದಿದ್ದರು.
* ಈ ವರ್ಷ ರಂಗನ ತಿಟ್ಟು ಪಕ್ಷಿಧಾಮಕ್ಕೆ ಪ್ರವಾಸ ಆಗಿದೆ.
* ಸಾಂತ್ವನ ಚೈತನ್ಯ ಚಾರಿಟೇಬಲ್ ಟ್ರಸ್ಟ್‌ನವರು ನೆಲೆ ಮಕ್ಕಳ ಹಲ್ಲಿನ ತಪಾಸಣೆ ಮಾಡಿಸಿಕೊಟ್ಟರು.

## ನಮ್ಮ ಮನೆ ನೆಲೆ

ರಕ್ಷಾಬಂಧನ, ಗಣೇಶೋತ್ಸವ, ನವರಾತ್ರಿಯಲ್ಲಿ ಬೊಂಬೆ ಹಬ್ಬ, ಕೈತುತ್ತು, ಸಂಕ್ರಾಂತಿ, ವಿವೇಕಾನಂದ ಜಯಂತಿ, ಭಾರತಮಾತಾ ಪೂಜೆ ಇವು ನಮ್ಮಮನೆ ನೆಲೆಯಲ್ಲಿ ನಡೆದ ಕೆಲವು ಕಾರ್ಯಕ್ರಮಗಳು.

* ಫೆಬ್ರವರಿ 3ರಂದು ನೆಲೆಯ ಮಕ್ಕಳಿಗಾಗಿ ಒಂದು ದಿನ ಮೈಸೂರು ಪ್ರವಾಸ ಏರ್ಪಡಿಸಲಾಗಿತ್ತು.

* ಏಪ್ರಿಲ್ 4–5–2019 ಕ್ಕೆ ನೆಲೆಯ ಮಕ್ಕಳಿಗೆ ಶಿಬಿರ ನಡೆಸಿ ಚಿತ್ರಕಲೆ, ಪೇಟಿಂಗ್, ಪೇಪರ್ ಚೀಲ ತಯಾರಿಕೆ, ಚಾಪೆ ತಯಾರಿ ಇತ್ಯಾದಿಗಳನ್ನು ಕಲಿಸಲಾಯಿತು.



* ನಮ್ಮಮನೆ ನೆಲೆಯಲ್ಲಿ ಪ್ರತಿನಿತ್ಯ ಸ್ಥಳೀಯ ಮಹಿಳೆಯರಿಗಾಗಿ ಯೋಗ ತರಗತಿ ಪ್ರಾರಂಭವಾಗಿದ್ದು 18–20 ಮಹಿಳೆಯರು ಭಾಗವಹಿಸುತ್ತಾರೆ.
* ಫೆಬ್ರವರಿ 22ರಂದು ನೆಲೆಯಲ್ಲಿ ಯೋಗ ಕುಟುಂಬ ಮಿಲನ ಕಾರ್ಯಕ್ರಮ ಏರ್ಪಡಿಸಲಾಗಿತ್ತು. 65–70 ಮಹಿಳೆಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಕೇಶವ ಸೇವಾಸಮಿತಿಯ ಶ್ರೀ ಪ್ರಕಾಶರಾಜು ಮಾರ್ಗದರ್ಶನ ಮಾಡಿದರು.

**ಚಂದನ ನೆಲೆ:**

ರಕ್ಷಾಬಂಧನ, ವರಮಹಾಲಕ್ಷ್ಮಿ ಹಬ್ಬ, ಶ್ರೀಕೃಷ್ಣ ಜನ್ಮಾಷ್ಟಮಿ, ಗಣೇಶೋತ್ಸವ, ಆಯುಧಪೂಜೆ, ವಿಜಯದಶಮಿ, ನರಕಚತುರ್ದಶಿ, ಲಕ್ಷ್ಮೀಪೂಜೆ, ತುಳಸಿ ಪೂಜೆ, ಸೇವಾದಿನ, ವಿವೇಕಾನಂದ ಜಯಂತಿ, ಮಕರಸಂಕ್ರಾಂತಿ, ಶಿವರಾತ್ರಿ, ಹೋಳಿ, ಯುಗಾದಿ, ರಾಮನವಮಿ ಇವು ನೆಲೆಯಲ್ಲಿ ನಡೆದ ಹಬ್ಬಗಳು.

ಪ್ರತಿಭಾ ಕಾರಂಜಿಯಲ್ಲಿ ಚಂದನ ನೆಲೆಯ ಮಕ್ಕಳ ಸಾಧನೆ.

1) ಪವನ–ಮೂರನೇ ತರಗತಿ:– ಅಭಿನಯ ಗೀತೆಯಲ್ಲಿ ಪ್ರಥಮ
2) ದೇವಾನಂದ– ಐದನೇ ತರಗತಿ:– ಅಭಿನಯ ಗೀತೆಯಲ್ಲಿ ಪ್ರಥಮ
3) ಸ್ವಾಮಿತಂಡ – 5,6,7ನೇ ತರಗತಿ:– ದೇಶಭಕ್ತಿಗೀತೆಯಲ್ಲಿ ದ್ವಿತೀಯ
4) ಸ್ವಾತಂತ್ರ್ಯ ದಿನಾಚರಣೆ ಕುರಿತು ಭಾಷಣ ಸ್ಪರ್ಧೆಯಲ್ಲಿ 9ನೇ ತರಗತಿಯ ವಿಘ್ನೇಶ್ವರನ್ ಪ್ರಥಮ ಸ್ಥಾನ ಪಡೆದಿದ್ದಾನೆ.

   * ಜನವರಿ 31 ಕ್ಕೆ ಮಕ್ಕಳ ಪ್ರವಾಸ ಆಗಿದೆ.
   * 4–3–2019 ರಂದು ಮಹಾಶಿವರಾತ್ರಿ ಅಂದು ನೆಲೆಯ ಎಲ್ಲಾ ಮಕ್ಕಳು ಉಪವಾಸ ಮಾಡಿ ರಾತ್ರಿ ಪೂರ್ತಿ ಜಾಗರಣೆ ಮಾಡಿ ಮರುದಿನ ಬೆಳಿಗ್ಗೆ ಸ್ನಾನ ಉಪಹಾರದೊಂದಿಗೆ ವ್ರತವನ್ನು ಪೂರೈಸಿದರು.

## ಅಜಿತನೆಲೆ –ಮೈಸೂರು

ಯುಗಾದಿ, ರಾಮನವಮಿ, ಗುರುಪೂರ್ಣಿಮೆ, ವರಮಹಾಲಕ್ಷ್ಮಿ, ರಕ್ಷಾಬಂಧನ. ಶ್ರೀಕೃಷ್ಣಜನ್ಮಾಷ್ಟಮಿ, ಗಣೇಶಚತುರ್ಥಿ, ಆಯುಧಪೂಜೆ, ಸೇವಾದಿನ, ದೀಪಾವಳಿ, ಸಂಕ್ರಾಂತಿ, ಶಿವರಾತ್ರಿ ಇವು ಅಜಿತನೆಲೆಯಲ್ಲಿ ನಡೆದ ಹಬ್ಬಗಳು.

### ಸಾಧನೆಗಳು:

1) ಪ್ರತಿಭಾಕಾರಂಜಿಯಲ್ಲಿ ಪ್ರವೀಣ ಮಿಮಿಕ್ರಿಯಲ್ಲಿ ಪ್ರಥಮಸ್ಥಾನ.
2) ಶಾಲೆ ವಾರ್ಷಿಕೋತ್ಸವದ ಕಬಡ್ಡಿ ಸ್ಪರ್ಧೆಯಲ್ಲಿ ಸ್ಯಾಮುಯಲ್ ಹಾಗೂ ಸಂಜಯರ ತಂಡಕ್ಕೆ ಜಯ.
3) ಇಂದಿರಾ ಶಾಲೆಯಲ್ಲಿ 8ನೇ ತರಗತಿಯ ಅನಿಲ್ ಮತ್ತು ಅಜಯರಿಗೆ "ಬೆಸ್ಟ್ ಸ್ಟೂಡೆಂಟ್ ಅವಾರ್ಡ್" ಗರಿ.

* ಆಶಾದಾಯಕ ಪೌಂಡೇಷನ್ ನವರು ನಡೆಸಿದ ನೃತ್ಯಸ್ಪರ್ಧೆಯಲ್ಲಿ ಅಜಿತ ನೆಲೆಯ ಮಕ್ಕಳಿಗೆ ದ್ವಿತೀಯ ಸ್ಥಾನ.
* ಶಾಲೆಯ ಕ್ರೀಡಾಕೂಟದಲ್ಲಿ ಅರಸು 100ಮೀ ಓಟ ಹಾಗೂ 500.ಮೀ. ರಿಲೇ ಓಟದಲ್ಲಿ ಪ್ರಥಮ ಅನಿಲ್ ಉದ್ದಜಿಗಿತ 3ನೇ ಸ್ಥಾನ, 100ಮೀ ಓಟ 3ನೇ ಸ್ಥಾನ, 600ಮೀ. ರಿಲೇ 3ನೇಸ್ಥಾನ.
* ಪ್ರಬಂಧ ಸ್ಪರ್ಧೆಯಲ್ಲಿ ಅನಿಲ್ ಪ್ರಥಮ ಸ್ಥಾನ.

## ಆಶಾಕಿರಣ ನೆಲೆ

ಗುರುಪೂರ್ಣಿಮೆ, ನಾಗರಪಂಚಮಿ, ವರಮಹಾಲಕ್ಷ್ಮಿ, ಶ್ರೀಕೃಷ್ಣ ಜನ್ಮಾಷ್ಟಮಿ ಮತ್ತು ರಕ್ಷಾಬಂಧನ, ಗಣೇಶೋತ್ಸವ, ದಸರಾ, ದೀಪಾವಳಿ, ತುಳಸಿ ಪೂಜೆ. ವಿವೇಕಾನಂದ ಜಯಂತಿ, ಸಂಕ್ರಾಂತಿ, ಶಿವರಾತ್ರಿ ಇವು ನೆಲೆಯಲ್ಲಿ ಆಚರಿಸಿದ ಹಬ್ಬಗಳು.



* ಗ್ಲೋಬಲ್ ಸಂಸ್ಥೆಯ ಸದಸ್ಯರು ನೆಲೆಯ ಮಕ್ಕಳನ್ನು ನೆಹರೂ ತಾರಾಲಯಕ್ಕೆ ಕರೆದುಕೊಂಡು ಹೋಗಿದ್ದರು.
* ನೆಲೆಯಲ್ಲಿ 2–9–2018 ರಂದು ರಕ್ಷಾಬಂಧನ ಮತ್ತು ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಒಟ್ಟಾಗಿ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಮಕ್ಕಳ ಪಾಲಕರೂ ಬಂದಿದ್ದರು. ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸಿ ಅರ್ಚಕರ ಮೂಲಕ ವಿಧ್ಯುಕ್ತವಾಗಿ ಪೂಜೆ, ರಕ್ಷಾಬಂಧನ

ಮತ್ತು ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ಭೋಜನ, ಸಂಜೆ ಮೊಸರುಕುಡಿಕೆ ಕಾರ್ಯಕ್ರಮ ಆಚರಿಸಲಾಯಿತು.



* ರಾಮಯ್ಯ ಯುನಿವರ್ಸಿಟಿ ಕಾಲೇಜಿನ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ದಿ. 27-10-2018 ರಂದು ನೆಲೆಗೆ ಬಂದು ಮಕ್ಕಳ ಜೊತೆ ಕಾಲ ಕಳೆದರು. ಮಕ್ಕಳಿಗೆ ಶಿಕ್ಷಣ ಹಾಗೂ ಮುಂದಿನ ಜೀವನದ ಬಗ್ಗೆ ಉತ್ತಮ ಸಲಹೆಗಳನ್ನು ಕೊಟ್ಟರು.
* ಲಯನ್ಸ್ ಕ್ಲಬ್ ಸದಸ್ಯರು, ಮಾರುತಿ ನಗರದ ಉದ್ಯೋಗಿಗಳು ಹಾಗೂ ಇನ್ನೂ ಕೆಲವು ಸಂಸ್ಥೆಗಳವರು ನೆಲೆ ಭೇಟಿ ನೀಡಿ ಮಕ್ಕಳೊಂದಿಗೆ ಕಾಲ ಕಳೆದು ಅವರಿಗೆ ಉಪಯುಕ್ತ ಮಾಹಿತಿಗಳನ್ನು ನೀಡಿರುತ್ತಾರೆ.
* ಕಾವಲಭೈರಸಂದ್ರದ ಆರ್ಶ ಚಾರಿಟೇಬಲ್ ಟ್ರಸ್ಟ್ ಪೂಜ್ಯ ಶ್ರೀಶ್ರೀ ಹರ್ಷಾನಂದ ಸ್ವಾಮಿಜಿಯವರು ನೆಲೆಗೆ ಆಗಮಿಸಿ ಮಕ್ಕಳನ್ನು ಆಶೀರ್ವದಿಸಿದರು.
* ಆರ್ಟ್ ಆಫ್ ಲಿವಿಂಗ್‌ನ 18 ಜನ ನೆಲೆಗೆ ಬಂದಿದ್ದು ಮಕ್ಕಳಿಗೆ ಭಜನೆ ಹೇಳಿಕೊಟ್ಟರು.
* ರಥಸಪ್ತಮಿಯಂದು ನೆಲೆಯ ಎಲ್ಲಾ ಮಕ್ಕಳು 108 ಸೂರ್ಯನಮಸ್ಕಾರ ಮಾಡಿದರು.
* ಓಂ ನಮಃ ಶಿವಾಯ ಟ್ರಸ್ಟ್ ನ 40 ಸದಸ್ಯೆಯರು ನೆಲೆಗೆ ಬಂದು ಮಕ್ಕಳಿಗೆ ಉಡುಗೊರೆ ಕೊಟ್ಟರು.

## ದ್ವಾರಕ ನೆಲೆ

ನ್ಯೂ ಹೊರೈಸನ್ (ಬೆಂಗಳೂರು) ಸಂಸ್ಥೆಯವರ ಹಾಗೂ ಸ್ಥಾನೀಯರ ಸಹಕಾರದೊಂದಿಗೆ ದ್ವಾರಕ ನೆಲೆಯ ಖಾಲಿ ಜಾಗದಲ್ಲಿ ಕಟ್ಟಡವೊಂದನ್ನು ಕಟ್ಟಲಾಗಿದೆ. ಮುಂದೆ ಅಲ್ಲಿ ಸಾರ್ವಜನಿಕರಿಗಾಗಿ ಹೊಲಿಗೆ ತರಬೇತಿ ಕೇಂದ್ರ ಇತ್ಯಾದಿ ವೃತ್ತಿಪರ ಚಟುವಟಿಕೆಯನ್ನು ನಡೆಸಲು ಯೋಜನೆ ಇದೆ.

ಈ ವರ್ಷ ನೆಲೆಯ 10 ಮಕ್ಕಳು ಗಮಕ ಪರೀಕ್ಷೆ ತೆಗೆದು ಕೊಂಡಿದ್ದು ಎಲ್ಲರೂ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಅಪೂರ್ವ ಮತ್ತು ಹಂಸಲೇಖಾ ಬಾಲವಿಕಾಸ ಪರೀಕ್ಷೆಯನ್ನು ಬರೆದಿದ್ದಾರೆ. ತುಮಕೂರು ಜಿಲ್ಲೆಗೆ 1 ಮತ್ತು 2ನೇ ಸ್ಥಾನ ಹಾಗೂ ರಾಜ್ಯ ಮಟ್ಟದಲ್ಲಿ 3-4ನೇ ಸ್ಥಾನ ಪಡೆದಿದ್ದಾರೆ.

ನೆಲೆಯ ಮಕ್ಕಳು ಶ್ರೀಕೃಷ್ಣ ಜನ್ಮಾಷ್ಟಮಿ ಸಂದರ್ಭದಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸಿ ರಂಗೋಲಿ, ಭಗವದ್ಗೀತೆ, ದೇಶಭಕ್ತಿಗೀತೆ, ದೇವರನಾಮ ಮುಂತಾದ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿದ್ದಾರೆ.

ಗಣೇಶನ ಹಬ್ಬದ ಸಮಯದಲ್ಲಿ ಪರಿಸರ ಸ್ನೇಹಿಗಣಪನನ್ನು ಕೂರಿಸಲಾಯಿತು. ಜೊತೆಯಲ್ಲಿ ನೆಲೆಯ ಮಕ್ಕಳು ಸ್ವತಃ ನಿರ್ಮಿಸಿದ 21 ಗಣಪತಿಗಳನ್ನು ಪೂಜಿಸಲಾಯಿತು.

ಸ್ವಾತಂತ್ರ್ಯ ದಿನವನ್ನು SIT ಕಾಲೇಜಿನ ವಿದ್ಯಾರ್ಥಿಗಳ ಜೊತೆ ಆಚರಿಸಲಾಯಿತು.

## ಮಾಧವ ನೆಲೆ –ಶಿವಮೊಗ್ಗ

ಈ ವರ್ಷ ಮಾಧವ ನೆಲೆಯ ವಿದ್ಯಾರ್ಥಿಯೊಬ್ಬ ವಿದ್ಯಾಭ್ಯಾಸದ ನಂತರ ರಾ.ಸ್ವ ಸಂಘದ ಪ್ರಚಾರಕನಾಗಿರುವುದು ಹೆಮ್ಮೆಯ ವಿಷಯ.

ನೆಲೆಯ ಮಕ್ಕಳು ಈ ವರ್ಷ ಸೇವಾದಿನದ ನಿಮಿತ್ತ 'ಸಮುದ್ರಮಥನ' ಎಂಬ ಯಕ್ಷಗಾನ ಪ್ರಸಂಗವನ್ನು ಪ್ರಸ್ತುತಪಡಿಸಿರುತ್ತಾರೆ. ಕರ್ನಾಟ ಯಕ್ಷಗಾನ ಮಂಡಳಿಯವರ ಆಶ್ರಯದಲ್ಲಿ ನಡೆದ ಯಕ್ಷಗಾನ ಕಾರ್ಯಕ್ರಮದಲ್ಲಿ ಚಕ್ರವ್ಯೂಹ ಎಂಬ ಪ್ರಸಂಗವನ್ನು ಪ್ರದರ್ಶಿಸಿದರು.

ನೆಲೆಯಲ್ಲಿ ನವರಾತ್ರಿಯಲ್ಲಿ 9ದಿನಗಳು ಗೊಂಬೆ ಕೂಡಿಸಿ ಪ್ರತಿದಿನ ಸಂಜೆ ವಿವಿಧ ಸಂಘಸಂಸ್ಥೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. 10 ವಿವಿಧ ಸಂಸ್ಥೆಗಳು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡವು.

ಕಾರ್ತಿಕ ಮಾಸದಲ್ಲಿ ದೀಪಪೂಜೆ ನಡೆಸಲಾಯಿತು. ಕಾರ್ಯಕ್ರಮದಲ್ಲಿ 40 ಮಹಿಳೆಯರು ಭಾಗವಹಿಸಿದರು, ಶ್ರೀಕೃಷ್ಣಜನ್ಮಾಷ್ಟಮಿ ಸಂದರ್ಭದಲ್ಲಿ ಸುತ್ತಲಿನ ಬಂಧುಗಳಿಗೆ ರಂಗವಲ್ಲಿ ಸ್ಪರ್ಧೆ, ಶ್ರೀಕೃಷ್ಣ ನಾಮಾವಳಿ ಸ್ಪರ್ಧೆ, ಮಕ್ಕಳಿಗೆ ಕೃಷ್ಣನ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಣೆ ಪುಟಾಣಿ ಮಕ್ಕಳು ರಾಧಾಕೃಷ್ಣರ ವೇಷದಲ್ಲಿ ಮಡಿಕೆ ಒಡೆಯುವ ಸ್ಪರ್ಧೆ ಏರ್ಪಡಿಸಲಾಗಿತ್ತು.

ಮಾಧವ ಭಜನಾ ಮಂಡಳಿ ಸಕ್ರಿಯವಾಗಿದ್ದು ತಿರುಪತಿತಿರುಮಲ ದೇವಸ್ಥಾನದಲ್ಲಿ ನೊಂದಾಯಿತವಾಗಿದೆ. 2108 ರ ಬೇಸಿಗೆಯಲ್ಲಿ ನಲಿ–ಕಲಿ, ಹಾಗೂ ಇಂಗ್ಲೀಷ್ ಕೋಚಿಂಗ್ ತರಗತಿಗಳನ್ನು ನೆಲೆಯ ಮಕ್ಕಳಿಗೆ ನಡೆಸಲಾಯಿತು. 2018–19 ನೇ ಸಾಲಿನಲ್ಲಿ ನೆಲೆಯಲ್ಲಿ 210 ಜನ್ಮದಿನದ ಆಚರಣೆಗಳು ಹಾಗೂ 60 ವೈವಾಹಿಕ ದಿನದ ಆಚರಣೆಗಳು ನಡೆದಿವೆ.

ನೆಲೆಯಲ್ಲಿ ನಡೆಯುವ ಹೊಲಿಗೆ ತರಬೇತಿ ಕಾರ್ಯಕ್ರಮದಲ್ಲಿ 20 ಜನ ಹಾಗೂ ಯೋಗಾಸನ ತರಗತಿಯಲ್ಲಿ 25 ಜನ ಭಾಗವಹಿಸುತ್ತಿದ್ದಾರೆ.

* * *

# ಸ್ವಾವಲಂಬನೆ

ಸ್ವಾವಲಂಬನೆ ಉದ್ಯೋಗ ನಿರ್ಮಾಣ ದೃಷ್ಟಿಯಿಂದ ಪ್ರತಿಷ್ಠಾನ ನಡೆಸುತ್ತಿರುವ ಪ್ರಕಲ್ಪ. ಲಗ್ಗೆರೆಯಲ್ಲಿರುವ ನರೇಂದ್ರ ನೆಲೆಯ ಕಟ್ಟಡದಲ್ಲಿ ಕಳೆದ 10 ವರ್ಷಗಳಿಂದ ಹೊಲಿಗೆ ತರಬೇತಿ ಕೇಂದ್ರ ನಡೆಯುತ್ತಿದೆ. ಪೂರ್ವಾಹ್ನ 20 ಜನರ ಒಂದು ತಂಡ ಹಾಗೂ ಅಪರಾಹ್ನ ಒಂದು ತಂಡ ಈ ರೀತಿ ಎರಡು ತಂಡಗಳಲ್ಲಿ ಇಲ್ಲಿ ತರಬೇತಿ ಕೊಡಲಾಗುತ್ತದೆ. ಒಂದು ತಂಡದ ತರಬೇತಿಯ ಕಾಲಾವಧಿ 6 ತಿಂಗಳು, ಈ ವರೆಗೆ 1554 ಮಹಿಳೆಯರಿಗೆ ಹೊಲಿಗೆ ತರಬೇತಿ ಕೊಡಲಾಗಿದೆ. ತರಬೇತಿ ಪಡೆದವರಲ್ಲಿ ಹೆಚ್ಚಿನವರು ಸುತ್ತಮುತ್ತಲಿನ ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ಉದ್ಯೋಗ ಪಡೆಯುತ್ತಾರೆ. ಕೆಲವರು ಸ್ವಂತ ಟೈಲರಿಂಗ್ ನಡೆಸಿ ಸಂಪಾದಿಸುತ್ತಿದ್ದಾರೆ.

ಹೊಲಿಗೆ ತರಬೇತಿಗಾಗಿ ಬರುವವರಿಗಾಗಿ ಇಲ್ಲಿ ಅನ್ಯಾನ್ಯ ಕಾರ್ಯಕ್ರಮಗಳೂ ನಡೆಯುತ್ತವೆ. ವಿವೇಕಾನಂದ ಜಯಂತಿ. ಸಂಕ್ರಾಂತಿ ಉತ್ಸವ, ಗೋಪೂಜೆ, ರಕ್ಷಾಬಂಧನ, ವರಮಹಾಲಕ್ಷ್ಮೀಪೂಜೆ..ಇತ್ಯಾದಿ.

ಹೊಲಿಗೆ ತರಬೇತಿ ಕೇಂದ್ರದ ಮಹಿಳೆಯರಿಗಾಗಿ ಎರಡು ಸ್ವಸಹಾಯ ಸಂಘಗಳನ್ನು ಪ್ರಾರಂಭಿಸಲಾಗಿದೆ. ವಾರಕ್ಕೊಮ್ಮೆ ಈ ಮಹಿಳೆಯರಿಗಾಗಿ ಮಾತೃಮಂಡಳಿಗಳೂ ನಡೆಯುತ್ತವೆ.

ಡಿಸೆಂಬರ್ 2019ರಲ್ಲಿ ಹೊಲಿಗೆ ತರಬೇತಿ ಮುಗಿಸಿದ 37 ಹಾಗೂ 38ನೇ ತಂಡದ ಮಹಿಳೆಯರಿಗೆ ಪ್ರಮಾಣಪತ್ರ ವಿತರಿಸಲಾಯಿತು.





**ಪ್ರಮಾಣ ಪತ್ರ ವಿತರಣೆ – ನೆಲೆ ಸ್ವಾವಲಂಬನೆ**

ನರೇಂದ್ರ ನೆಲೆ ಕಟ್ಟಡದಲ್ಲಿ ಇರುವ ಕಂಪ್ಯೂಟರ್ ತರಬೇತಿ ಕೇಂದ್ರದಲ್ಲಿ 24 ಕಂಪ್ಯೂಟರ್‌ಗಳಿದ್ದು ಪ್ರ ಎರಡು ತಂಡಗಳಲ್ಲಿ ತರಬೇತಿ ಕೊಡಲಾಗುತ್ತದೆ. ತರಬೇತಿಯ ಅವಧಿ 3ತಿಂಗಳು, ಈ ಕೇಂದ್ರದಲ್ಲಿ OFFICE MANAGEMENT, TALLY, GSTಗಳನ್ನು ಕಲಿಸಲಾಗುತ್ತದೆ. ಪ್ರಸ್ತುತ OFFICE MANAGEMENT ನ 33ನೇ ತಂಡ ಹಾಗೂ TALLY, GST ಯ 3ನೇ ತಂಡ ತರಬೇತಿ ಪಡೆಯುತ್ತಿವೆ.

ಶಿಕ್ಷಣದ ಜೊತೆಯಲ್ಲಿ ಶಿಕ್ಷಾರ್ಥಿಗಳಿಗೆ ಹಲವುರೀತಿಯ ಕಾರ್ಯಕ್ರಮಗಳು ಹಾಗೂ ಸ್ಪರ್ಧೆಗಳು ಇರುತ್ತವೆ.

ನೆಲೆಯಲ್ಲಿ ನಡೆಯುವ ಎಲ್ಲಾ ವಿಶೇಷ ಕಾರ್ಯಕ್ರಮಗಳಲ್ಲಿ ಈ ಎರಡು ಕೇಂದ್ರದ ಸದಸ್ಯರು ಉತ್ಸಾಹದಿಂದ ಸಹಕರಿಸುತ್ತಾರೆ. ವಿಶೇಷ ದಿನಗಳಲ್ಲಿ ನೆಲೆಯ ಮಕ್ಕಳನ್ನು ತಮ್ಮ ಮನೆಗೂ ಕರೆದೊಯ್ದು ಉಣಬಡಿಸುತ್ತಾರೆ.

ಈ ಎರಡೂ ಕೇಂದ್ರಗಳಿಗೆ ರೋಟರಿ ವಿಜಯನಗರದ ಆರ್ಥಿಕ ಸಹಯೋಗ ಇದೆ.

ಪದ್ಮನಾಭನಗರದಲ್ಲಿ ವಸುಂಧರಾ ಕೇಂದ್ರದಲ್ಲೂ ಇತ್ತೀಚೆಗೆ ಹೊಲಿಗೆ ತರಬೇತಿ ಕೇಂದ್ರ ಪ್ರಾರಂಭವಾಗಿದ್ದು 2 ತಂಡಗಳಲ್ಲಿ 20 ಮಹಿಳೆಯರು ಹೊಲಿಗೆ ಕಲಿಯುತ್ತಿದ್ದಾರೆ.

ಸೇವಾಮಿತ್ರ ಯೋಜನೆಯಲ್ಲಿ ಆರು ಹೊಲಿಗೆ ತರಬೇತಿ ಕೇಂದ್ರಗಳು 21 ಸ್ವಸಹಾಯ ಸಂಘಗಳು ಇವೆ.





# ಸಮಗ್ರ ಶಿಶು ಶಿಕ್ಷಣ

ಸಮಗ್ರ ಶಿಶು ಶಿಕ್ಷಣದ ಕಾರ್ಯ ಬೀದರ್ ಸುತ್ತಮುತ್ತ ವಿಸ್ತಾರವಾಗಿರುವುದು ಈ ಬಾರಿಯ ವಿಶೇಷ. ಅಕ್ಟೋಬರ್‌ನಲ್ಲಿ 4 ದಿನಗಳ ಕಾರ್ಯಾಗಾರ ಕರ್ನಾಟಕ ಉತ್ತರಕ್ಕೆ ಪ್ರತ್ಯೇಕವಾಗಿ ನಡೆದಿದ್ದು 20 ಶಿಶುಮಂದಿರಗಳಿಂದ 30 ಶಿಕ್ಷಕಿಯರು ಭಾಗವಹಿಸಿದ್ದು ಈ ಎಲ್ಲಾ 20 ಕೇಂದ್ರಗಳಿಗೂ ಭಗಿನಿ ಶಂಕ್ರಮ್ಮ ಪ್ರವಾಸ ಮಾಡಿದ್ದಾರೆ. ಬೀದರ್‌ನಲ್ಲಿ ಪೂರ್ವಾರ್ಧ ಹಾಗೂ ಉತ್ತಾರಾರ್ಧದ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕಿಯರಿಗೆ ಒಂದೊಂದು ದಿನಗಳ ಅಭ್ಯಾಸ ವರ್ಗ ನಡೆದಿದೆ.

ಸಮಗ್ರ ಶಿಶು ಶಿಕ್ಷಣಕ್ಕೆ ಒಳಪಟ್ಟು ವಿವಿಧರೀತಿಯ ಪ್ರಯೋಗಗಳು ನಡೆಯುತ್ತಿರುವ ಶಿಶುಮಂದಿರಗಳ ಸಂಖ್ಯೆ ವಿಭಾಗಶಃ ಈ ರೀತಿ ಇದೆ.

| | |
|---|---|
| ಮಂಗಳೂರು ವಿಭಾಗ | 60 |
| ಶಿವಮೊಗ್ಗ ವಿಭಾಗ | 9 |
| ಧಾರವಾಡ ವಿಭಾಗ | 6 |
| ಕಲ್ಬುರ್ಗಿ ವಿಭಾಗ | 13 |
| | 88 |

* ಮೇ 2018ರಲ್ಲಿ ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರದಲ್ಲಿ ನಡೆದ ಶಿಶು ಶಿಕ್ಷಣ ಶಿಬಿರದಲ್ಲಿ 11 ಜಿಲ್ಲೆಗಳ 39 ಕೇಂದ್ರಗಳಿಂದ 72 ಮಾತಾಜಿಯವರು ಪಾಲ್ಗೊಂಡರು.
* ಅಕ್ಟೋಬರ್ ರಜೆಯಲ್ಲಿ ಕಲ್ಲಡ್ಕ, ಹೊಳೆಹೊನ್ನೂರು ಹಾಗೂ ಬೀದರ್‌ನ ತಡೋಳಗಳಲ್ಲಿ 4 ದಿನಗಳ ವರ್ಗ ವಿಭಾಗಶಃ ನಡೆದಿದೆ.
* ಧಾರವಾಡ ವಿಭಾಗ, ಸೇವಾಸಂಗಮ ಹಾಗೂ ಕಾಟಿಪಳ್ಳಗಳಲ್ಲಿ ಪ್ರತಿತಿಂಗಳು ಮಾತಾಜಿಯವರಿಗೆ ಅಭ್ಯಾಸವರ್ಗ ನಡೆಯುತ್ತದೆ.
* ದಕ್ಷಿಣ ಕನ್ನಡ, ಶಿವಮೊಗ್ಗ, ಬೀದರ್‌ಗಳಲ್ಲಿ ಎರಡುಬಾರಿ ಮಾತಾಜಿಯರಿಗೆ ಒಂದೊಂದು ದಿನದ ಅಭ್ಯಾಸ ವರ್ಗಗಳು ನಡೆದಿದೆ.

* ಶಿಶು ಮಂದಿರಗಳ ವ್ಯವಸ್ಥಾಪಕರಿಗೆ ಪುತ್ತೂರಿನಲ್ಲಿ ಅಭ್ಯಾಸ ವರ್ಗ ನಡೆದಿದೆ.
* ದಕ್ಷಿಣ ಕನ್ನಡ, ಶಿವಮೊಗ್ಗ ವಿಭಾಗಗಳಲ್ಲಿ, ಮುಧೋಳದಲ್ಲಿ ಶಿಶು ಮಂದಿರಗಳ ಪಾಲಕರಿಗೆ ಅಭ್ಯಾಸ ವರ್ಗಗಳು ನಡೆದಿವೆ.

**ಹಲವೆಡೆಗಳಲ್ಲಿ ವರ್ಷದಲ್ಲಿ ಎರಡುಬಾರಿ ನಡೆದಿದೆ.**

* ಸಾಮಾನ್ಯವಾಗಿ ಶಿಶು ಮಂದಿರದ ಮಕ್ಕಳಿಗೆ ವರ್ಷದಲ್ಲಿ ಎರಡುಬಾರಿ ಹೊರಸಂಚಾರ ನಡೆಯುತ್ತದೆ. ಅದರಲ್ಲಿ ಒಂದುಬಾರಿ ಪಾಲಕರ ಜೊತೆ ಹೊರಸಂಚಾರ ನಡೆಯುತ್ತದೆ.
* ಕಲ್ಲಡ್ಕ ಕಿನ್ಯ ಮತ್ತು ಪುತ್ತೂರು ಶಿಶುಮಂದಿರದ ಕಡೆಯಿಂದ ನವದಂಪತಿಗಳ ಸಮಾವೇಶ ನಡೆದಿದೆ. ಕಲ್ಲಡ್ಕದಲ್ಲಿ 145, ಕಿನ್ಯದಲ್ಲಿ 56 ಹಾಗೂ ಪುತ್ತೂರಿನಲ್ಲಿ 38 ದಂಪತಿಗಳು ಭಾಗವಹಿಸಿದ್ದು ಶ್ರೀ ಸು ರಾಮಣ್ಣನವರು ಮಾರ್ಗದರ್ಶನ ಮಾಡಿದರು.

ಶಿಶು ಮಂದಿರಗಳಲ್ಲಿ ಆಯಾ ಪ್ರದೇಶಗಳಲ್ಲಿ ನಡೆಯುವ ಎಲ್ಲಾ ಹಬ್ಬಗಳನ್ನು ಆಚರಿಸಲು ಆಗ್ರಹವಿದೆ. ಹಾಗಾಗಿ ಸ್ವಾತಂತ್ರೋತ್ಸವ, ರಕ್ಷಾಬಂಧನ, ವರಮಹಾಲಕ್ಷ್ಮೀ ಪೂಜೆ (ಮಾತೆಯರಿಗಾಗಿ) ಶ್ರೀ ಕೃಷ್ಣಜನ್ಮಾಷ್ಟಮಿ ರಕ್ಷಾಬಂಧನ, ಶಾರದಪೂಜೆ, ಸಂಕ್ರಾಂತಿ, ತುಳಸಿ ಪೂಜೆ, ಗೋಪೂಜೆ ಇತ್ಯಾದಿ ಹಬ್ಬಗಳನ್ನು ಶಿಶುಮಂದಿರದ ಮಕ್ಕಳಿಗಾಗಿಯೇ ಆಚರಿಸಲಾಗುತ್ತದೆ. ವರ್ಷಾರಂಭದಲ್ಲಿ ಮಕ್ಕಳನ್ನು ಶಾಲೆಗೆ ಬರಮಾಡಿಕೊಳ್ಳುವ ಪ್ರವೇಶೋತ್ಸವ, ಶಿಶುಮಂದಿರದ ವಾರ್ಷಿಕೋತ್ಸವ ಹಾಗೂ ಮಕ್ಕಳಿಗೆ ಹುಟ್ಟು ಹಬ್ಬದ ಕಾರ್ಯಕ್ರಮಗಳು ನಡೆಯುತ್ತವೆ.

ಎಲ್ಲ ಶಿಶುಮಂದಿರಗಳಲ್ಲಿ ಬಾಲಗೋಕುಲ ಹಾಗೂ ಮಾತೃಮಂಡಳಿಗಳು ನಡೆಯುತ್ತವೆ, ಹಲವುಕಡೆಗಳಲ್ಲಿ ಅಕ್ಟೋಬರ್‌ನಲ್ಲಿ ಅಥವಾ ಏಪ್ರಿಲ್‌ನಲ್ಲಿ ವ್ಯಕ್ತಿತ್ವ ವಿಕಾಸ ಶಿಬಿರಗಳು ನಡೆಯುತ್ತವೆ.

ಈ ವರ್ಷ ನಡೆದಿರುವ ಚಟವಟಿಕೆಗಳು ಹಾಗೂ ಕಾರ್ಯಕ್ರಮಗಳು ಹೀಗಿವೆ

**ಚಟುವಟಿಕೆಗಳು :**

| | |
|---|---|
| ಬಾಲಗೋಕುಲ | 70 |
| ಜೋಳಿಗೆ ಪುಸ್ತಕಾಲಯ | 5 |
| ಮನೆಪಾಠ | 12 |
| ಮಾತೃಮಂಡಳಿ | 50 |
| ಸ್ವಸಹಾಯ ಸಂಘ | 11 |



| | |
|---|---|
| ಯಕ್ಷಗಾನ ತರಬೇತಿ | 2 |
| ಭಜನೆ | 10 |
| ಸತ್ಸಂಗ | 2 |
| ಯೋಗ | 2 |
| ಕಿಶೋರಭಾರತಿ | 10 |
| ಒಟ್ಟು | 174 |

**ಕಾರ್ಯಕ್ರಮಗಳು :**

| | | |
|---|---|---|
| ರಕ್ಷಾಬಂಧನ | = 85 | |
| ವರಮಹಾಲಕ್ಷ್ಮೀವ್ರತ | = 15 | |
| ಶ್ರೀಕೃಷ್ಣಜನ್ಮಾಷ್ಟಮಿ | = | 64 |
| ಗಣೇಶೋತ್ಸವ | = | 6 |
| ತುಳಸಿ ಪೂಜೆ | = | 7 |
| ಗೋಪೂಜೆ | = | 4 |
| ಶಾರದಾ ಪೂಜೆ | = | 9 |
| ಸಂಕ್ರಾಂತಿ | = | 14 |
| ಯುಗಾದಿ | = | 4 |
| ಮಕ್ಕಳ ಶಿಬಿರಗಳು | = | 5 |
| ಗುರುಪೂಜೆ | = | 23 |
| ದೀಪಾವಳಿ | = | 1 |
| ಸಾಮೂಹಿಕ ಹುಟ್ಟುಹಬ್ಬ | = | 11 |
| ಯೋಗದಿನ | = | 5 |
| ಅಕ್ಷರಾಭ್ಯಾಸ ಕಾರ್ಯಕ್ರಮ | = | 12 |
| ಸೇವಾದಿನ | = | 13 |







| | | |
|---|---|---|
| ದೀಪಪೂಜೆ | = | 1 |
| ವಿಜಯದಶಮಿ | = | 1 |
| | | 283 |

**ಕಾರ್ಯಕ್ರಮಗಳ ವಿಶೇಷಗಳು**

* ಕಿನ್ಯ, ಕಾಟಿಪಳ್ಳಗಳ ವರಮಹಾಲಕ್ಷ್ಮೀ ವ್ರತ ಶಿಶುಮಂದಿರದ ಸಮಿತಿಯವರು ನಡೆಸುವ ಊರಿನ ಕಾರ್ಯಕ್ರಮವಾಗಿದ್ದು ಕಾರ್ಯಕ್ರಮದಲ್ಲಿ 2–3 ಸಾವಿರ ಜನ ಸೇರುತ್ತಾರೆ. ಶಿಶುಮಂದಿರದ ಸಮಿತಿಯ ಮಾತೆಯರು ಸಂಪರ್ಕ, ಧನಸಂಗ್ರಹಗಳನ್ನು ಮಾಡುತ್ತಾರೆ.
* ಕಿನ್ಯ, ಕಳಂಜಗಳ ಶಿಶುಮಂದಿರಗಳ ವಾರ್ಷಿಕೋತ್ಸವಕ್ಕೆ 800–1000 ಜನ ಗ್ರಾಮಸ್ಥರು ಭಾಗವಹಿಸುತ್ತಾರೆ.
* ಕಲ್ಲಡ್ಕದಲ್ಲಿ ಪ್ರತಿವರ್ಷ ನಡೆಯುವ ಕ್ರೀಡೋತ್ಸವದಲ್ಲಿ ಶಿಶುಮಂದಿರಗಳ ಎಲ್ಲ ಮಕ್ಕಳೂ ಭಾಗವಹಿಸುತ್ತಾರೆ.
* ರಿಪ್ಪನ್‌ಪೇಟೆಯ ರಾಷ್ಟ್ರೋತ್ಥಾನ ಶಿಶುಮಂದಿರದ ಮಕ್ಕಳು ಪಾಲಕರ ಮುಂದೆ 35 ರೀತಿಯ ವಿಜ್ಞಾನ ಪ್ರಯೋಗಗಳನ್ನು ಮಾಡಿ ತೋರಿಸಿದ್ದಾರೆ.

**ಪೂರ್ವಗುರುಕುಲ :** ಶಿಶು ಶಿಕ್ಷಣ ಮಾದರಿಯಲ್ಲಿಯೇ 1–4ನೇ ತರಗತಿಯವರೆಗೆ ಶಿಕ್ಷಣವನ್ನು ಮುಂದುವರೆಸಲು ಮಂಗಳೂರು ಶಿವಮೊಗ್ಗ ವಿಭಾಗಗಳ 11 ಶಿಕ್ಷಣ ಸಂಸ್ಥೆಗಳಲ್ಲಿ ಪ್ರಯೋಗ ನಡೆದಿದೆ. ಕಲ್ಲಡ್ಕದಲ್ಲಿ ಈ ಕುರಿತಾಗಿ ಶಿಕ್ಷಕಿಯರಿಗೆ ಮೇ ತಿಂಗಳು ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಅಭ್ಯಾಸ ವರ್ಗಗಳು ನಡೆದಿವೆ.





# ಸುಪ್ರಜಾ

## (ಗರ್ಭಸಂಸ್ಕಾರ ಕೇಂದ್ರ)




ಆಗಸ್ಟ್ 19– 2018 ರಂದು ತ್ಯಾಗರಾಜ ನಗರದಲ್ಲಿ ಸುಪ್ರಜಾ (ಗರ್ಭಸಂಸ್ಕಾರ ಕೇಂದ್ರ) ಲೋಕಾರ್ಪಣೆಗೊಂಡಿತು. ಪ್ರಿಯರಾದ ಶ್ರೀ ಗಂಗಾಧರ ಶಾಸ್ತ್ರಿಯವರು ತಾವು ನಡೆಸುತ್ತಿದ್ದ ಮಹಾಲಕ್ಷ್ಮೀ ಶಾರದ ಎಜುಕೇಷನ್ ಟ್ರಸ್ಟ್‌ನ್ನು ವಿಸರ್ಜಿಸಿ ಅದರ ಕಟ್ಟಡವನ್ನು ಹಿಂದೂಸೇವಾ ಪ್ರತಿಷ್ಠಾನಕ್ಕೆ ಸೇವಾ ಚಟುವಟಿಕೆಗಳಿಗೆಂದು ದಾನ ಮಾಡಿದರು. ಉಡುಪಿಯ ಆಯುರ್ವೇದಿಕ್ ಕಾಲೇಜಿನಿಂದ ನಿವೃತ್ತರಾದ ಡಾ. ಉಷಾ ಅದೇ ಸಮಯದಲ್ಲಿ ಸೇವೆಗೆ ತಮ್ಮ ಸಮಯವನ್ನು ಕೊಡಲು ಬಂದರು. ಈಗ ಹಿಂದು ಸೇವಾ ಪ್ರತಿಷ್ಠಾನ ಅಲ್ಲೊಂದು ಗರ್ಭಸಂಸ್ಕಾರ ಕೇಂದ್ರವನ್ನು ಡಾ ಉಷಾ ಸಹಾಯದಿಂದ ಉಚಿತವಾಗಿ ನಡೆಸುತ್ತಿದೆ. ಅಲ್ಪಕಾಲದಲ್ಲಿ ಈ ಕೇಂದ್ರ ಜನಪ್ರಿಯವಾಗುತ್ತಿದ್ದು ಉತ್ತಮ ಫಲಿತಾಂಶವನ್ನು ಕೊಟ್ಟಿದೆ. ಬಹುಕಾಲದಿಂದ ಗರ್ಭಧರಿಸಲಾಗದವರು ಇಲ್ಲಿನ ಚಿಕಿತ್ಸೆಯಿಂದ ಗರ್ಭಧರಿಸಿದ್ದಾರೆ. ಹಲವು ಬಾರಿ ಗರ್ಭಪಾತವಾದವರಿಗೆ ಗರ್ಭ ಸ್ಥಿರವಾಗಿದೆ ಹಾಗೂ ಗರ್ಭಧಾರಣೆಯ ಅವಧಿಯಲ್ಲಿ ರಕ್ತದೊತ್ತಡ, ಸಿಹಿಮೂತ್ರ ಇತ್ಯಾದಿಗಳಿಂದ ಬಳಲುತ್ತಿದ್ದವರಿಗೆ ಇಲ್ಲಿ ಪರಿಹಾರ ಸಿಕ್ಕಿದೆ. ಸಂಪೂರ್ಣ ಭಾರತೀಯ ಚಿಂತನೆಯ ಆಧಾರದಲ್ಲಿ ಆಯುರ್ವೇದ, ಯೋಗ, ಪ್ರಾಣಯಾಮ, ಧ್ಯಾನ, ಸಂಗೀತ ಇವುಗಳ ಮೂಲಕ ಇಲ್ಲಿ ಚಿಕಿತ್ಸೆ ನೀಡಲಾಗುತ್ತದೆ.

**ಸಫಲತೆಯ ಉದಾಹರಣೆಗಳು:**

1. ಈವರೆಗೆ 'ಸುಪ್ರಜಾ' ಕೇಂದ್ರದಿಂದ ಚಿಕಿತ್ಸೆ ಪಡೆದು ಹೆರಿಗೆ ಆದವರು ಒಟ್ಟು 8 ಮಹಿಳೆಯರು. ಎಲ್ಲಾ ಮಕ್ಕಳೂ ಆರೋಗ್ಯದಿಂದ ಚೆನ್ನಾಗಿವೆ. ಇವರ ಪೈಕಿ ನಾಲ್ಕು ಮಹಿಳೆಯರಿಗೆ ಸಾಮಾನ್ಯ (ಸಿಸೇರಿಯನ್ ಇಲ್ಲದೇ) ಹೆರಿಗೆಯಾಗಿದ್ದಾರೆ ನಾಲ್ವರು ಸಿಸೇರಿಯನ್ ಮೂಲಕ ಮಕ್ಕಳನ್ನು ಪಡೆದಿದ್ದಾರೆ.

   ಆಯುಷ್ ಟಿವಿಯಲ್ಲಿ ಸುಪ್ರಜಾದ ಪ್ರಮುಖರಾದ ಡಾ|| ಉಷಾ ಗರ್ಭಸಂಸ್ಕಾರದ ಬಗ್ಗೆ ಮಾತನಾಡಿದ್ದು ನಾಲ್ಕು ಕಂತುಗಳಲ್ಲಿ ಪ್ರಸಾರವಾಗಿದೆ. ತುಂಬಾ ಜನ ಅದಕ್ಕೆ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ್ದಾರೆ.

   **ಮೇರಾಪರಿವಾರ್ – ಆನಂದಿ ಪರಿವಾರ** ಕಾರ್ಯಕ್ರಮದಲ್ಲಿ ಹಾಗೂ ಸಂತೋಷಿ ಸ್ನೇಹವೃಂದ ಚಿಕ್ಕಲಸಂದ್ರ ಇವರ ಮಾತೃಮಂಡಳಿಯ ಕಾರ್ಯಕ್ರಮದಲ್ಲಿ ತ್ರಿಭುವನ ಸೊಸೈಟಿಯ ಕಾರ್ಯಕ್ರಮದಲ್ಲಿ ಗರ್ಭಸಂಸ್ಕಾದರ ಬಗ್ಗೆ ಉಪನ್ಯಾಸ ಕೊಡಲಾಗಿದೆ.

2) ಶ್ರೀಮತಿ ವೈಷ್ಣವಿ 3ನೇ ಬಾರಿ ಗರ್ಭ ಧರಿಸಲು ಸುಪ್ರಜಾಕ್ಕೆ ಬಂದರು. ಅವರ ಮೊದಲ ಮಗುವಿಗೆ 7 ವರ್ಷ. ಎರಡನೆಯ ಬಾರಿ ಗರ್ಭ ಧರಿಸಿದಾಗ ಗರ್ಭಸ್ಥ ಮಗುವಿನ ಹೃದಯ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ತಿಳಿದು ಗರ್ಭಪಾತ ಮಾಡಿಸಿಕೊಂಡಿದ್ದರು. ಈಗ 5 ವರ್ಷಗಳ ನಂತರ ಮತ್ತೆ ಮಗು ಬೇಕು, ಮಗುವಿನ ಆರೋಗ್ಯ ಚೆನ್ನಾಗಿ ಇರಬೇಕೆಂದು ಆಯುರ್ವೇದ ಬಳಕೆಗಾಗಿ 'ಸುಪ್ರಜಾ' ಕ್ಕೆ ಬಂದರು. 'ಸುಪ್ರಜಾ' ಕ್ಕೆ ಬಂದ ಎರಡೇ ತಿಂಗಳಲ್ಲಿ ಅವರು ಗರ್ಭಧರಿಸಿದರು, ಸ್ಕ್ಯಾನಿಂಗ್ ರಿಪೋರ್ಟ್ ಪ್ರಕಾರ ಮಗುವಿನಲ್ಲಿ ಯಾವುದೇ ದೋಷಗಳಿಲ್ಲ.

3) ಶ್ರೀಮತಿ ಪ್ರಸನ್ನ ಅವರು ಆಂಧ್ರಪ್ರದೇಶದಲ್ಲಿ ಇರುವವರು. ಮದುವೆಯಾಗಿ 7 ವರ್ಷಗಳಾದರೂ ಮಕ್ಕಳಾಗಲಿಲ್ಲ I.V.F. ಸಹಾಯ ಪಡೆದು ಗರ್ಭಧರಿಸಿದರು. ಅವರು 2ನೇ ತಿಂಗಳಿನಿಂದಲೇ ಅಧಿಕ ರಕ್ತದೊತ್ತಡ ಹಾಗೂ 5ನೇ ತಿಂಗಳಿನಿಂದ ಅಧಿಕ ಸಕ್ಕರೆ ಕಾಯಿಲೆಯ ಸಮಸ್ಯೆಯಿಂದ ಬಳಲುತ್ತಿದ್ದರು. ಇನ್ಸುಲಿನ್ ತೆಗೆದುಕೊಳ್ಳುತ್ತಿದ್ದರು. ಅವರಿಗೆ ಆಯುರ್ವೇದದ ಔಷಧಗಳನ್ನು ಕೊಡಲಾಯಿತು. ಧ್ಯಾನ, ಶೀಥಿಲೀಕರಣಗಳನ್ನು ಕಲಿಸಲಾಯಿತು. ಮಂತ್ರಗಳು ಹಾಗೂ ಸಂಗೀತವನ್ನು ಕೇಳಿಸಲಾಯಿತು ಮೊದಲು 170/110 ಇದ್ದ ರಕ್ತದೊತ್ತಡ ಇವೆಲ್ಲದರ ಪರಿಣಾಮವಾಗಿ 130/90 ಕ್ಕೆ ಇಳಿಯಿತು. ಸಕ್ಕರೆಯ ಅಂಶವೂ ಸಾಮಾನ್ಯ ಸ್ಥಿತಿಗೆ ಇಳಿಯಿತು, ಗರ್ಭಸ್ಥ ಮಗುವಿಗೂ ಯಾವುದೇ ತೊಂದರೆ ಇರಲಿಲ್ಲ.

4) ಶ್ರೀಮತಿ ಸ್ಮಿತಾ 'ಸುಪ್ರಜಾ' ಕ್ಕೆ ಬಂದಾಗ Relroplacenta ಕಾಯಿಲೆಯಿಂದ ಬಳಲುತ್ತಿದ್ದರು. ಗರ್ಭಧರಿಸಿದ ಒಂದುವರೆ ತಿಂಗಳಿಗೆ ರಕ್ತಸ್ರಾವ ಕಾಣಿಸಿಕೊಂಡಿತ್ತು. ಅವರಿಗೆ ಆಯುರ್ವೇದ ಚಿಕಿತ್ಸೆ ನೀಡಲಾಯಿತು ಮತ್ತು ಪ್ರತಿ ಶನಿವಾರ ಯೋಗ, ಪ್ರಾಣಾಯಾಮ, ಧ್ಯಾನ, ಶ್ಲೋಕಗಳನ್ನು ಕಲಿಸಲಾಯಿತು. ಸಂಗೀತವನ್ನೂ ಕೇಳುತ್ತಿದ್ದರು. ಇವರಿಗೆ ಸಿಜೇರಿಯನ್ ಮೂಲಕ ಮಗು ಆಗಿದ್ದು ಮಗುವಿನಲ್ಲಿ ಯಾವುದೇ ದೋಷಗಳಿಲ್ಲದೇ ಆರೋಗ್ಯದಿಂದ ಇದೆ.

# ಆಶ್ರಯ – ಹಿರಿಯರ ಮನೆ

## (ಜನಸೇವಾ ವಿಶ್ವಸ್ಥನಿಧಿ)



ಕಾಸರಗೋಡು ತಾಲ್ಲೂಕು ಕನ್ಯಪಾಡಿ ಆಶ್ರಯ – ಹಿರಿಯರ ಮನೆ. ಜನಸೇವಾ ವಿಶ್ವಸ್ತನಿಧಿ ಟ್ರಸ್ಟ್ ಕಡೆಯಿಂದ ನಡೆಯುತ್ತಿರುವ ಚಟುವಟಿಕೆ. ವೃದ್ಧಾಶ್ರಮದ ಜೊತೆಯಲ್ಲಿ ಅಲ್ಲಿ ಒಂದು ಶಿಶುಮಂದಿರ ಹಾಗೂ ಬಾಲಗೋಕುಲ ನಡೆಯುತ್ತಿದೆ.

# ಕಾವೇರಿ ನ್ಯಾಷನಲ್ ಪಬ್ಲಿಕ್ ಸ್ಕೂಲ್

## ( ಚಾಣಕ್ಯ ಭಾರತಿ)



ಕಾವೇರಿ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಹೆಬ್ಬಾಳ ಸಮೀಪದ ಚೋಳನಾಯಕನ ಹಳ್ಳಿಯಲ್ಲಿ ಕಳೆದ 3 ವರ್ಷಗಳಿಂದ ನಡೆಯುತ್ತಿದೆ. ಆಂಗ್ಲ ಮಾಧ್ಯಮದ ಈ ಶಾಲೆಯಲ್ಲಿ ಈಗ 50 ಮಕ್ಕಳು ಒಂದರಿಂದ 7ನೇ ತರಗತಿವರೆಗೆ ಕಲಿಯುತ್ತಿದ್ದಾರೆ.

ಶಾಲೆಯ ಜೊತೆಗೆ ಪ್ರತಿದಿನ ಒಂದು ಉಚಿತಯೋಗ ತರಗತಿ ನಡೆಯುತ್ತಿದ್ದು 16 ಜನ ಈಗ ಭಾಗವಹಿಸುತ್ತಿದ್ದಾರೆ. ಪ್ರತಿದಿನ ಒಂದು ಉಚಿತ ಪಾಠದ ತರಗತಿ ನಡೆಯುತ್ತಿದ್ದು 18 ಮಕ್ಕಳು ಅದರ ಉಪಯೋಗ ಪಡೆಯುತ್ತಿದ್ದಾರೆ.

ರಾಷ್ಟ್ರೋತ್ಥಾನ ಪರಿಷತ್ತಿನ ಸಹಯೋಗದಿಂದ ಸ್ಥಳೀಯರಿಗೆ ಕಣ್ಣಿನ ತಪಾಸಣೆ ಕಾರ್ಯಕ್ರಮ ನಡೆದಿದ್ದು ಸುಮಾರು 300 ಜನ ಉಪಯೋಗ ಪಡೆದಿದ್ದಾರೆ.